ಕನ್ನಡ ಯಕ್ಷಗಾನ ಪ್ರಸಂಗ

ಆಚಾರ್ಯ ಶ್ರೀಮಧ್ವಚರಿತ

ಸದಾನಂದ ಶರ್ಮ

224

ಕನ್ನಡ ಯಕ್ಷಗಾನ ಪ್ರಸಂಗ

ಆಚಾರ್ಯ ಶ್ರೀಮಧ್ವಚರಿತ

ರವಿ ಮಡೋಡಿ

ಸದಾನಂದ ಶರ್ಮ

ಯಕ್ಷಗಾನ ಕೇಂದ್ರ
ಶಿವಪ್ರಭಾ, ಹಯಗ್ರೀವನಗರ, ಉಡುಪಿ – 576 102

Acharya Srimadhwacharitha: A Kannada Yakshagana Prasanga written by Sri Sadananda Sharma, Sagar.
Published by Yakshagana Kendra, Shivaprabha, Hayagriva nagar, Udupi - 576102; 0820-2521159

2014

© Reserved

Pages : 47

Price : ₹. 30

ISBN : 978-81-906210-7-6

DTP: Savitha Shanthapriya, Udupi
Printed at : Prakash Offset, Mangalore

ರವಿ ಮಡೋಡಿ

ಪ್ರಕಾಶಕರ ಮಾತು

ಶಂಕರಾಚಾರ್ಯರು, ರಾಮಾನುಜಾರ್ಯರು ಮತ್ತು ಮಧ್ವಾಚಾರ್ಯರು ತ್ರಿಮತಾಚಾರ್ಯರು ಎಂದು ಪ್ರಸಿದ್ಧರು. ಯಕ್ಷಗಾನವು ರಾಮಾಯಣ ಮಹಾಭಾರತಗಳೇ ಮೊದಲಾದ ಪುರಾತನಗ್ರಂಥಗಳಲ್ಲಿ ಚಿತ್ರಿತರಾದ ವ್ಯಕ್ತಿವಿಶೇಷಗಳನ್ನು ರಂಗಕ್ಕೆ ತಂದು ಪ್ರದರ್ಶಿಸುವ ಕಲೆಯಾದರೂ ಋಷಿಮುನಿಗಳನ್ನೂ ಗುರುಗಳನ್ನೂ ಆಚಾರ್ಯರನ್ನೂ ರಂಗದ ಮೇಲೆ ರೂಪಿಸಿದ್ದಿದೆ. ತ್ರಿಮತಾಚಾರ್ಯರಲ್ಲಿ ಶಂಕರಾಚಾರ್ಯರ ಬಗೆಗೆ ಈಗಾಗಲೇ ಯಕ್ಷಗಾನ ಪ್ರಸಂಗಗಳು ಬಂದಿವೆ. ಕನ್ನಡದಲ್ಲಿಯೂ ಸಂಸ್ಕೃತದಲ್ಲಿಯೂ ಶಂಕರಾಚಾರ್ಯರ ಬಗೆಗಿನ ಆಟ ತಾಳ ಮದ್ದಳೆಗಳಾಗಿವೆ. ಇದೀಗ ಮಧ್ವಾಚಾರ್ಯರ ಬಗೆಗಿನ ಯಕ್ಷಗಾನ ಪ್ರಸಂಗವು ರಚಿತವಾಗಿ ಪ್ರಕಟಗೊಳ್ಳುತ್ತಿರುವುದು ಗಮನಾರ್ಹ ಸಂಗತಿಯಾಗಿದೆ. ಈಗಾಗಲೇ ಮಧ್ವಾಚಾರ್ಯರ ಬಗೆಗೆ ಒಂದು ಪ್ರಸಂಗವು ರಚಿತವಾಗಿ ರಂಗದ ಮೇಲೇ ಬಂದಿದ್ದು ಇದೀಗ ಪ್ರಕಟಗೊಳ್ಳುತ್ತಿರುವ ಪ್ರಸಂಗವು ಐತಿಹಾಸಿಕ ದೃಷ್ಟಿಯಿಂದ ಎರಡನೆಯದಾಗಿದೆ. ತ್ರಿಮತಾಚಾರ್ಯರಲ್ಲಿ ಇನ್ನೊಬ್ಬರಾದ ರಾಮಾನುಜಾಚಾರ್ಯರ ಬಗೆಗೆ ಯಕ್ಷಗಾನಪ್ರಸಂಗ ರಚಿತವಾಗಿರುವುದು ಇದುವರೆಗೆ ತಿಳಿದು ಬಂದಿರುವುದಿಲ್ಲ.

ಧರ್ಮತತ್ತ್ವಬೋಧಕರಾದ ಸಂನ್ಯಾಸಿಗಳ ಜೀವನದಲ್ಲಿ ವಿಶೇಷವಾದ ಯಾವ ಲೌಕಿಕಸಂಘರ್ಷವಾಗಲೀ ವ್ಯಕ್ತಿಘರ್ಷಣೆಗಳಾಗಲಿ ಶೃಂಗಾರಾದ್ಭುತಾದಿ ರಸವ್ಯಂಜಕವಾದ ಘಟನೆಗಳಾಗಲಿ ಇರುವುದಿಲ್ಲವಾದುದರಿಂದ ಆ ಜೀವನವಸ್ತುಗಳು ಯಕ್ಷಗಾನಕ್ಕೆ ಹೊಂದಿಕೆಯಾಗಲಾರವೆಂದು ಸಾಮಾನ್ಯ ಯಕ್ಷಗಾನ ಕ್ಷೇತ್ರಪರಿಣತರು ಭಾವಿಸುತ್ತಾರಾದರೂ ತತ್ತ್ವಪ್ರತಿಪಾದನೆಯ ದೃಷ್ಟಿಯಿಂದ ತಾಳಮದ್ದಳೆಗಳಲ್ಲಿ ಇಂತಹ ಪ್ರಸಂಗಗಳು ರಂಜಿಸಬಲ್ಲವು. ಅಲ್ಲದೆ ಯಕ್ಷಗಾನ ಪ್ರಸಂಗ ಕೃತಿಗಳನ್ನು ಸಾಹಿತ್ಯಕೃತಿಗಳೆಂದೂ ಅಧ್ಯಯನ ಮಾಡಬಹುದಾದುದರಿಂದ ಅವು ಉಪಾದೇಯವೇ ಆಗಿವೆ.

ಪ್ರಸ್ತುತ **ಆಚಾರ್ಯ ಶ್ರೀಮಧ್ವಚರಿತ**ವೆಂಬ ಪ್ರಸಂಗಕೃತಿಯನ್ನು ಬರೆದ ಶ್ರೀ ಸದಾನಂದ ಶರ್ಮರದು ಇದು ಮೊದಲನೆಯ ಪ್ರಯತ್ನ

ವಾದರೂ ಪ್ರಸಂಗಕೃತಿ ಸೊಗಸಾಗಿ ಮೂಡಿ ಬಂದಿದೆ ಎಂದು ನಮ್ಮ ಪರಿಚಿತ ವಿದ್ವಾಂಸರು ಶ್ಲಾಘಿಸಿದ್ದಾರೆ.

ನಮ್ಮ ಕೇಂದ್ರವು ಯಕ್ಷಗಾನ, ಶಿಕ್ಷಣ, ಅಧ್ಯಯನ, ಸಂಶೋಧನೆಗಳಾಗಿಗೆಯೇ ಮೀಸಲಾದುದು. ನಮ್ಮ ಕೇಂದ್ರದಿಂದ ಈಗಾಗಲೇ ಯಕ್ಷಗಾನ ವಿಷಯವಾಗಿ ಹಲವಾರು ಕೃತಿಗಳು ಹೊರಬಂದಿವೆ. ಅದೇ ರೀತಿ ಈ ಪ್ರಸಂಗ ಪ್ರಸಂಗಕೃತಿಯನ್ನು ಕೇಂದ್ರದ ಮೂಲಕ ಪ್ರಕಾಶಪಡಿಸಲು ನಮಗೆ ತುಂಬಾ ಸಂತೋಷವಿದೆ.

ಕೃತಿಯ ಪುಟವಿನ್ಯಾಸ ಮಾಡಿದ ಉಡುಪಿಯ ಸವಿತಾ ಶಾಂತಪ್ರಿಯರಿಗೂ, ಅಂದವಾಗಿ ಮುದ್ರಿಸಿಕೊಟ್ಟ ಮಂಗಳೂರಿನ ಪ್ರಕಾಶ್ ಆಫ್‌ಸೆಟ್ ಮುದ್ರಣಾಲಯದವರಿಗೂ ಕೃತಜ್ಞತೆಗಳು.

ಜನವರಿ 1, 2014

ಹೆರಂಜೆ ಕೃಷ್ಣ ಭಟ್ಟ
ನಿರ್ದೇಶಕರು

ಸದಾಶಯ

ಭಾರತದ ಅಧ್ಯಾತ್ಮ ಲೋಕದ ಮಹಾನಕ್ಷತ್ರಗಳಲ್ಲೊಬ್ಬರಾದ ಆಚಾರ್ಯ ಶ್ರೀಮಧ್ವರ ಜೀವನಗಾಥೆಯನ್ನು ಯಕ್ಷಗಾನ ಪದ್ಯಗಳಲ್ಲಿ ಬರೆಯಬಲ್ಲೆನೆಂಬ ನಿರೀಕ್ಷೆಯೇ ಇರಲಿಲ್ಲ. ಅದೇನೋ ಸುದೈವ. ತಪ್ಪೋ ಸರಿಯೋ ತಿಳಿದಷ್ಟು ಬರೆದು ಬಿಟ್ಟೆ. ಇದಕ್ಕೆ ಮುಖ್ಯ ಕಾರಣ ಪ್ರೇರಣೆ ಪೂಜ್ಯ ಡಾ। ಬನ್ನಂಜೆ ಗೋವಿಂದಾಚಾರ್ಯರ ಮಾತು ಮತ್ತು ಬರೆಹಗಳು. ಆದ್ದರಿಂದ ಈ ಪುಟ್ಟ ಕೃತಿಕಾಣಿಕೆಯನ್ನು ಅವರ ಪದಮೂಲಕ್ಕೆ ಸಮರ್ಪಿಸುತ್ತಿದ್ದೇನೆ.

ಬನ್ನಂಜೆ ಗುರುಗಳಲಿ । ಬಿನ್ನಹವು ನುಡಿ ಕದ್ದೆ ।
ಮನ್ನಿಸಿಹಿರೆಂದೆಂಬ ಬಲದಿ ಮಾಡಿಹೆನು ॥
ಇನ್ನು ಮುಂದಕು ಕರುಣೆ । ಕಣ್ಣು ಕಾಪಿಡುತಿರಲಿ ।
ದೆನ್ನ ವಂದನೆ ಪುಣ್ಯಚರಣಗಳಿಗೆ ॥

ಯಕ್ಷಗಾನ ಪ್ರಸಂಗ ರಚನೆಗೆ ಮುಂದಾದಾಗ ಗೆಳೆಯ ಉಮಾಮಹೇಶ್ವರ ಹೆಗಡೆ ಹೆಗ್ಗೋಡು ಜೊತೆಗೆ ಉಡುಪಿಗೆ ಬಂದು ಪ್ರಸಂಗದ ರೂಪಿಗೆ ಕಾರಣರಾದರೆ, ಭಾಗವತರಾದ ಶ್ರೀ ತ್ರಿಯಂಬಕ ಹೆಗಡೆ ಇಡುವಾಣಿ ಅವಶ್ಯ ನೆರವು ನೀಡಿ ಸಹಕರಿಸಿದ್ದಾರೆ. ಭಾವ ತನ್ಮಯತೆಯಿಂದ ಹುಟ್ಟಿದ ಪದ್ಯಗಳನ್ನು ಸರಿಗೊಳಿಸಿ, ರಾಗ, ತಾಳ ಗಳನ್ನು ಹೆಸರಿಸಿದವರಿವರು. ಇವರಿಬ್ಬರಿಗೂ ನಮನಗಳು. ಪ್ರಸಂಗ ವನ್ನು ತಜ್ಞರು ಬಳಸಿ ಸೊಗಸನ್ನು ಮೆರೆಸಲೆಂಬುದು ಕವಿಭಾವದ ಒಳ ಆಶಯವಾಗುತ್ತಿದೆ. ಮೂಕರನ್ನು ವಾಚಾಳಿಗಳನ್ನಾಗಿಸಬಲ್ಲ ಹೆಳವರನ್ನೂ ಗಿರಿಯ ಉತ್ತುಂಗಕ್ಕೇರಿಸಬಲ್ಲ ಪರಮಾನಂದದಾಯಕನು ಎಲ್ಲವನ್ನು ನಡೆಸುತ್ತಾನೆಂಬ ನಂಬುಗೆಯೇ ಇವೆಲ್ಲವಕ್ಕೂ ಮೂಲ ವೆನ್ನುವೆ.

ಈ ಪುಸ್ತಕವನ್ನು ಪ್ರಕಾಶಿಸುತ್ತಿರುವ ಯಕ್ಷಗಾನ ಕೇಂದ್ರ, ಹಯಗ್ರೀವ ನಗರ ಉಡುಪಿ ಹಾಗೂ ಅಚ್ಚುಕಟ್ಟಾಗಿ ಮುದ್ರಿಸಿದ ಮಂಗಳೂರಿನ ಪ್ರಕಾಶ್ ಆಫ್‌ಸೆಟ್ ಪ್ರಿಂಟರ್ಸ್‌ರವರಿಗೆ ಶ್ರದ್ಧೆಯ ಕೃತಜ್ಞತೆಗಳು. ಬರೆವ ಸಮಯದಲ್ಲಿನ ಮನೋದ್ವೇಗ ಮತ್ತು ನಿರು ದ್ಯೋಗಗಳನ್ನು ಮೌನವಾಗಿ ಸಹಿಸಿಕೊಂಡ ನೆಚ್ಚಿನ ಮನದನ್ನೆ

ಭಾರತಿಗೂ ಅಭಿನಂದನೆಗಳು. ಉಡುಪಿಯಲ್ಲಿ 2014 ಜನವರಿಯಲ್ಲಿ ಜರುಗುತ್ತಿರುವ ಪರ್ಯಾಯ ಮಹೋತ್ಸವದಲ್ಲಿ ಈ ಪ್ರಸಂಗಕೃತಿ ಬಿಡುಗಡೆಯಾಗುತ್ತಿದೆ ಎಂಬುದು ಸಂತಸವೆನಿಸಿದೆ. ಇದಕ್ಕೆ ಅವಕಾಶ ಮಾಡಿಕೊಟ್ಟ ಎಲ್ಲರಿಗೂ ಹಾಗೂ ಭಾಗವಹಿಸಲಿರುವ ಎಲ್ಲ ಯತಿವರೇಣ್ಯರಿಗೂ ಗಣ್ಯರಿಗೂ ಶ್ರದ್ಧೆಯ ನಮಸ್ಕಾರಗಳು.

ಕಲೆಯಾಗಿ ಸ್ವೀಕರಿಸಿ, ಸಾಹಿತ್ಯ ಸೇರಿಸಿ, ಸಾಮಾಜಿಕ ಸ್ವಾಸ್ಥ್ಯ ಮತ್ತು ಹಿರಿತನಗಳ ಮೌಲ್ಯವನ್ನು ಗೌರವಿಸಿ, ತಮ್ಮ ಸೃಜನಶೀಲತೆಯಿಂದ ಯಶಸ್ಸನ್ನು ವಿಸ್ತರಿಸಿ ಕಲಾವಿದರು ಈ ಪ್ರಸಂಗವನ್ನು ಬಳಸಿಕೊಂಡು ಮೆರೆಸುವಂತಾಗಲಿ. ಇದನ್ನು ಉಡುಪಿಯ ಕಡೆಗೋಲ ಮುದ್ದುಕೃಷ್ಣ ಕಂಡು ಹರಸಲೆಂದು ಪ್ರಾರ್ಥಿಸುವೆ.

– ಸದಾನಂದ

ಆಚಾರ್ಯ ಶ್ರೀಮಧ್ವಚರಿತ : ಪ್ರಸಂಗ ಕಥಾಸಾರ

ಶ್ರೀಕೃಷ್ಣನ ಪೂರ್ಣಕೃಪೆ ನಮ್ಮ ಮೇಲಿರುವಂತೆ ನೀನೆಮಗೆ ಆಶೀರ್ವದಿಸೆಂದು ಪ್ರಥಮಪೂಜಿತನಾದ ವಿಘ್ನೇಶನನ್ನು ಪ್ರಾರ್ಥಿಸುತ್ತಾ ಪ್ರಸಂಗ ಆರಂಭವಾಗುತ್ತದೆ. ಭಕ್ತಿಮಾರ್ಗದ ಮೂಲಕ ಭಗವಂತನ ಕಾರುಣ್ಯಪ್ರಾಪ್ತಿ ಸುಲಭಸಾಧ್ಯವೆಂದು ಲೋಕಕ್ಕೆ ಸಾರಿದ ಮಹಾನುಭಾವ ರಾದ ಆಚಾರ್ಯ ಮಧ್ವರ ಜೀವನಚರಿತ್ರೆಯೇ ಈ ಪ್ರಸಂಗದ ಕಥಾ ವಸ್ತು. ಅನಕ್ಷರಸ್ಥ ಜನಸಮುದಾಯಕ್ಕೆ ಭಾಗವತ ಕಥೆಯನ್ನು ತಿಳಿಸುವ ಸಲುವಾಗಿ ಯಕ್ಷಗಾನಕಲೆಯನ್ನು ಪ್ರಾರಂಭಿಸಿದವರೆಂಬ ಕೀರ್ತಿಯೂ ಮಧ್ವಾಚಾರ್ಯರದ್ದಾಗಿದೆ. ಎಲ್ಲೂ ಕಥಾಭಾವಕ್ಕೆ ಲೋಪವಾಗದಂತೆ ಸಮುದಾಯದ ಶ್ರದ್ಧೆಗೆ ಭಂಗವಾಗದಂತೆ ರಂಗಕ್ರಿಯೆ ನಡೆಯಬೇಕಾ ದುದು ಅತ್ಯಂತ ಅವಶ್ಯವಾದುದು. ಕಲಾವಿದರಿಗೆ ಸಮುದಾಯದ ಸ್ವಾಸ್ಥ್ಯದ ಕುರಿತಾಗಿ ಜಾಗೃತಿ ಅತ್ಯವಶ್ಯ.

ಇಂದ್ರನ ಒಡ್ಡೋಲಗ. ತನ್ನ ದೇವಪರಿವಾರದೊಂದಿಗೆ ಲೋಕದ ಆಗುಹೋಗುಗಳ ಕುರಿತಾಗಿ ಸಮಾಲೋಚನೆ ನಡೆಸುತ್ತಿರು ವಾಗ ದೇವರ್ಷಿ ನಾರದರು ಆಗಮಿಸುತ್ತಾರೆ. ಬಂದ ನಾರದರನ್ನು ದೇವೇಂದ್ರನು ಸ್ವಾಗತಿಸಿ ಸತ್ಕರಿಸುತ್ತಾನೆ. ತಾನು ಬಂದ ಕಾರಣವನ್ನು ವಿವರಿಸಹೊರಟ ನಾರದರು ಕಲಿಗಾಲದ ಪರಾಕಾಷ್ಠೆಯ ಪರಿಣಾಮ ಗಳನ್ನು ಹೇಳುವರು. ಇದರಿಂದ ವ್ಯಥಿತನಾದ ಇಂದ್ರನು "ಹೌದು ಸ್ವಾಮೀ, ನಿಮ್ಮ ಮಾತು ಸತ್ಯವಾದುದೇ. ಆದರೆ ಇದರ ಪರಿಹಾರಕ್ಕೆ ದೇವತೆಗಳಾದ ನಾವೇನು ಮಾಡಬಹುದೆಂಬುದು ತೋಚುತ್ತಿಲ್ಲ. ಆ ಪುರುಷೋತ್ತಮನ ಸಂಕಲ್ಪದಂತೆಯೇ ತಾನೆ ಎಲ್ಲವೂ ಘಟಿಸುವುದು. ದಯಮಾಡಿ ನನಗೆ ಮಾರ್ಗದರ್ಶನ ಮಾಡಿರಿ" ಎಂದು ಪ್ರಾರ್ಥಿಸು ತ್ತಾನೆ. "ದೇವೇಂದ್ರಾ, ಜಗತ್ತಿನಲ್ಲಿ ತ್ರಿಗುಣಗಳೂ ವಿಜೃಂಭಿಸುತ್ತಿವೆ. ಸಾತ್ತ್ವಿಕತೆಯೂ ಇದೆ. ಆದರೆ ಪರಮಾತ್ಮ ಸಂಕೀರ್ತನೆಯಿಲ್ಲವಾಗಿದೆ. ಸಾತ್ತ್ವಿಕರು ಲೌಕಿಕಕರ್ಮಗಳಲ್ಲಿ ಆಸಕ್ತಿ ಕಳೆದುಕೊಂಡರೆ ಸನ್ಮಾರ್ಗ ಸಂಪದಗಳು ನಾಡಿನಲ್ಲಿ ಕಾಣಿಸುವುದಿಲ್ಲ. ಆಗ ಕೇವಲ ರಜಸ್ಸಿನ, ತಮಸ್ಸಿನ ಆಟಾಟೋಪಗಳೇ ಇರುವುದು" ಎಂದು ನಾರದರು ತಮ್ಮ ಆತಂಕವನ್ನು ಹೊರಗೆಡವಿದಾಗ ಸುರಪತಿಯು ಲೋಕದಲ್ಲಿ ಆನಂದ ವನ್ನು ಹೊಮ್ಮಿಸಬೇಕಾದ ಕಾರ್ಯದಲ್ಲಿ ತಾವೇನು ಮಾಡಬಹುದೆಂದು

ಪ್ರಶ್ನಿಸಿದಾಗ, ಎಲ್ಲರೂ ಸೇರಿ ಆ ವೈಕುಂಠಪತಿಯನ್ನು ಪ್ರಾರ್ಥಿಸುವುದೆಂದು ತೀರ್ಮಾನಿಸಿ ವೈಕುಂಠದೆಡೆಗೆ ತಮ್ಮ ಪ್ರಯಾಣ ಬೆಳೆಸಿ ಹರಿಯನ್ನು ಧ್ಯಾನಿಸುತ್ತಾರೆ. ದೇವತೆಗಳ ಪ್ರಾರ್ಥನೆಗೆ ಓಗೊಟ್ಟು ಹರಿಯು ದರ್ಶನವನ್ನಿತ್ತಾಗ ತಮ್ಮ ಅಳಲನ್ನು ತೋಡಿಕೊಳ್ಳುತ್ತಾರೆ. ಹದಿನಾಲ್ಕು ಲೋಕಗಳನ್ನು ಉಳಿಸಿ ಕಾಪಾಡೆಂದು ಕೋರುತ್ತಾರೆ.

ಶೇಷಶಾಯಿಯಾದ ಪರಮಾತ್ಮನು ದೇವತೆಗಳ ಆತಂಕವನ್ನು ಕಂಡು ನಗುತ್ತಾ ಅವರಿಗೆ ಸೂಕ್ಷ್ಮ ರಹಸ್ಯ ಸಂಗತಿಗಳನ್ನು ಬೋಧಿಸುತ್ತಾನೆ. ಸುಮನಸರೇ, ಈ ಪರಿಯ ಚಿಂತೆಗೆ ಅರ್ಥವಿಲ್ಲ. ಧರ್ಮವು ನಾಶವಾಗುವುದೆಂಬ ಭಯವನ್ನು ಬಿಡಿ. ಈ ಪಂಚಭೂತಗಳು, ಪಂಚ ತನ್ಮಾತ್ರೆಗಳು, ಪಂಚಕೋಶಗಳು ಮತ್ತು ಪಂಚೇಂದ್ರಿಯಗಳು ಹೀಗೆ ಈ ಪ್ರಪಂಚವು ಪಂಚಮುಖಿಯಾಗಿದೆ. ಅದಕ್ಕೆಂದೇ ಇದನ್ನು ಪ್ರಪಂಚವೆಂದು ಕರೆಯುತ್ತಾರೆ. ಈ ಪಂಚೀಕೃತವಾದ ಪ್ರಪಂಚದೊಳಗೆ ಪ್ರಾಣತತ್ವವು ಪಂಚರೂಪದಿಂದ ತುಂಬಿದೆ. ಪ್ರಾಣ, ಅಪಾನ, ವ್ಯಾನ, ಉದಾನ ಮತ್ತು ಸಮಾನ. ಇವುಗಳ ಜೊತೆಗೆ ಸ್ವಯಂ ತಾನೆ ಪಂಚರೂಪನಾಗಿ ನಿಂತು ನಿಯಂತ್ರಿಸುತ್ತೇನೆ. ಹಾಗೆಯೇ ಈ ಪ್ರಪಂಚದಲ್ಲಿ ಪಂಚವಿಧ ಭೇದಗಳನ್ನು ಗುರುತಿಸಬಹುದು. ಇದು ಪ್ರಕೃತಿಯ ನಿಯಮ. ಇಲ್ಲಿ ಒಂದು ಎರಡಲ್ಲ, ಎರಡು ಒಂದಲ್ಲ. ಪ್ರತಿಯೊಬ್ಬನಿಗೂ ತನ್ನದೇ ಆದ ವೈಶಿಷ್ಟ್ಯವಿದೆ, ಸ್ವಭಾವವಿದೆ, ವ್ಯಕ್ತಿತ್ವವಿದೆ. ಈ ವ್ಯಕ್ತಿತ್ವದ ಪೂರ್ಣ ವಿಕಾಸವೇ ಜೀವನದ ಗುರಿ. ವಿಕಸಿತ ವ್ಯಕ್ತಿತ್ವದ ಸವಿಯನ್ನು ಸವಿಯುವ ಪೂರ್ಣಾವಸ್ಥೆಯೇ ಮುಕ್ತಿ. ಅವರವರ ಸಾಧನೆಗೆ ತಕ್ಕಂತೆ ಅವರವರ ಸಿದ್ಧಿ. ಫಲಾಪೇಕ್ಷೆಯಿಲ್ಲದ ಕರ್ಮದಿಂದ ಸತ್ಯವನ್ನು ಗ್ರಹಿಸಬಹುದಾಗಿದೆ. ಸರ್ವವನ್ನು ಧರ್ಮವನ್ನೂ ನೆಲೆಗೊಳಿಸುವ ಸರ್ವಶಕ್ತನೊಬ್ಬನಿದ್ದಾನೆಂಬ ಸತ್ಯದ ಗ್ರಹಿಕೆಯೇ ಜೀವನದ ಎಲ್ಲ ಕೋಟಲೆಗಳಿಂದ ಬಿಡುಗಡೆ ಪಡೆವ ಸರಳ ಸೂತ್ರವಾಗಿದೆ. ದೇವತೆಗಳಾದ ನೀವು ಮರ್ತ್ಯರ ಕರ್ಮವು ಕೆಟ್ಟಾಗ ಸಂಕಷ್ಟಕ್ಕೀಡಾಗುತ್ತೀರಿ. ನಾನು ಈಗ ಹೇಳಿದ ಈ ಸರಳಸೂತ್ರಗಳನ್ನು ಜಗತ್ತಿನಲ್ಲಿ ಸಾರುವುದಕ್ಕಾಗಿ, ಜೀವವನ್ನು ಭಗವಂತನ ಜೊತೆಗೆ ಸಂಯೋಜಿಸುವ ಸುವ್ಯವಸ್ಥೆಯನ್ನು ರೂಪಿಸುವುದಕ್ಕಾಗಿ ಜೀವೋತ್ತಮನಾದ ವಾಯುದೇವನು ಭೂಲೋಕಕ್ಕೆ ತೆರಳಬೇಕೆಂದು ಶ್ರೀಹರಿಯು ನಿರ್ದೇಶಿಸುತ್ತಾನೆ.

ಮಹಾವಿಷ್ಣುವಿನ ಮಾತನ್ನು ಕೇಳಿದ ಮರುತನು ಅತ್ಯಂತ ಸಂತೋಷದಿಂದ ಭಗವಂತನ ಕರುಣೆಯನ್ನು ಪ್ರಾರ್ಥಿಸಿ ಅವತರಣಕ್ಕಾಗಿ ಧರೆಗಿಳಿಯುತ್ತಾನೆ. ಭರತಖಂಡದ ಪಶ್ಚಿಮ ಘಟ್ಟಗಳ ಕರಾವಳಿಯ ಒಂದು ಸುಂದರ ವಿಹಂಗಮ ಪ್ರದೇಶ ಪಾಜಕ. ಬೆಳ್ಳೆಯ ಗ್ರಾಮದಲ್ಲಿನ ಸುತ್ತಮುತ್ತಲ ಕಲ್ಲುಬಂಡೆಗಳ ನಡುವೆ ಚಿಕ್ಕ ತೊರೆಯೊಂದು ಹರಿಯುತ್ತ ಪೂರ್ವ ಪಶ್ಚಿಮ ಹಳ್ಳಿಗಳಾಗಿ ವಿಭಾಗಿಸಿದ್ದು ಪಶ್ಚಿಮದಲ್ಲಿ ಪಾಜಕವಿದೆ. ಬಂಡೆ ಬೆಟ್ಟದ ಮೇಲೆ ಪರಶುರಾಮನ ಗುಡಿಯಿದ್ದರೆ, ಪಕ್ಕದ ಕುಂಜಾರುಗಿರಿಯಲ್ಲಿ ಚಂಡಿ ದುರ್ಗಿಯ ದೇಗುಲವಿದೆ. ಇಂತಹ ಸುಂದರ ರಮ್ಯ ಹಳ್ಳಿಯಲ್ಲಿನ ಬ್ರಾಹ್ಮಣರ ಬೀದಿಯಲ್ಲಿ ನಡಿಲ್ಲಾಯರ ಮನೆ ಎಲ್ಲರ ಮನೆ ಮಾತಾಗಿತ್ತು. ಪ್ರಸ್ತುತ ನಾರಾಯಣಭಟ್ಟರೆಂಬ ಸಾತ್ವಿಕ ವಿದ್ವಾಂಸರು ಪತ್ನಿಯಾದ ಸತ್ಯವತಿಯೊಂದಿಗೆ ಸುಖದಾಂಪತ್ಯದಲ್ಲಿರುವಾಗ ಸತ್ಪುತ್ರನ ನಿರೀಕ್ಷೆಯಿಂದ ವ್ರತ ಉಪವಾಸಗಳನ್ನು ಕೈಗೊಂಡರು. ಉಡುಪಿಯ ಅನಂತ ಶಯನನಿಗೆ ಹರಕೆಹೊತ್ತು ಮಗನಿಗಾಗಿ ಪ್ರಾರ್ಥಿಸಿದರು.

ವಿಲಂಬಿ ನಾಮ ಸಂವತ್ಸರದ ಶರದೃತುವಿನಲ್ಲಿ ಆಶ್ವೀಜ ಶುಕ್ಲ ದಶಮಿಯ ಶುಭದಿನದಂದು ಶುಭಲಗ್ನ, ವಾರ, ನಕ್ಷತ್ರ ಯೋಗದಲ್ಲಿ ಈ ಧರೆಗೆ ಪುಣ್ಯಶಿಶುವಿನ ಜನನವಾಯಿತು. ಮಗುವಿಗೆ ವಾಸುದೇವನೆಂಬ ನಾಮಕರಣವನ್ನು ಮಾಡಿದರು. ಸುಂದರರೂಪಿನ ನಗುಮೊಗದ ಬಗೆಗಣ್ಣಿನ ಪುಟ್ಟ ಬಾಲಕ ಬಲೇ ಚುರುಕು. ವಾಸುದೇವನು ಮೂರು ವರ್ಷದವನಿದ್ದಾಗ ತಂದೆ ತಾಯಿಗಳೊಂದಿಗೆ ಸಮೀಪದ ನಿಡಿಯೂರು ಎಂಬಲ್ಲಿಗೆ ಬಂಧುಗಳ ಮನೆಗಾಗಿ ಹೋಗಿದ್ದನು. ದೊಡ್ಡವರೆಲ್ಲ ಸಂಭ್ರಮದಲ್ಲಿದ್ದಾಗ ಪುಟ್ಟಮಗು ದಾರಿಗಿಳಿದು ಹೊರಟೇ ಬಿಟ್ಟನು. ಸ್ವಲ್ಪ ಸಮಯದ ನಂತರ ಮನೆಯಲ್ಲಿ ಎಲ್ಲಿ ನೋಡಿದರೂ ವಾಸುದೇವನಿಲ್ಲದಾಗ ಎಲ್ಲರೂ ಹುಡುಕಹೊರಟರು. ದಾರಿಹೋಕರ ಮಾತಿನಂತೆ ಸಮೀಪದ ಕಾನಂಗಿಗೆ ಹೋದರು. ಆದರೆ ಮಗು ಅಲ್ಲಿಲ್ಲ. ತಾಳೆಕುಡೆ ಊರಿನ ಕಡೆ ಹೋಗುತ್ತಿದ್ದ ಸುದ್ದಿ ತಿಳಿದು ಅಲ್ಲಿಗೂ ಹೋಗಿ ನೋಡಿದರೆ ಮಗು ಅಲ್ಲಿಯೂ ಇಲ್ಲ. ಅಲ್ಲಿ ಉಡುಪಿಯೆಡೆಗೆ ಮಗು ಹೋಗುತ್ತಿತ್ತೆಂಬ ಸುದ್ದಿ ತಿಳಿದಾಗ ಎಲ್ಲರೂ ಅಲ್ಲಿಗೆ ಓಡಿದರು. ಅಲ್ಲಿ ಚಂದ್ರಮೌಳೀಶ್ವರ ದೇವರ ಮುಂದೆ ಪುಟ್ಟ ಬಾಲಕ ಧ್ಯಾನಾಸಕ್ತನಾಗಿದ್ದ. ಆಶ್ಚರ್ಯಗೊಂಡ ತಾಯಿ ಇಲ್ಲಿಗೆ ಹೇಗೆ ಬಂದೆ ಎಂದು ಮಗನನ್ನು ಕೇಳಿದಾಗ ಪುಟ್ಟ ಬಾಯಲ್ಲಿ ಅಮ್ಮಾ,

ನನ್ನೊಂದಿಗೆ ಭಗವಂತ ಬರುತ್ತಿದ್ದನಮ್ಮಾ. ಮೊದಲು ಕಾನಂಗಿಯಲ್ಲಿ ಶಂಕರ ನಾರಾಯಣನನ್ನು ತೋರಿಸಿದನು. ಆಮೇಲೆ ತಾಳಿಕುಡೆಯ ಮಹಲಿಂಗೇಶ್ವರನ ದರ್ಶನವನ್ನು ಮಾಡಿಸಿದನು. ಇದೀಗ ಚಂದ್ರ ಮೌಳೀಶ್ವರನ ದರ್ಶನವನ್ನು ನನಗಾಗಿ ಈ ಅನಂತಶಯನನೆ ಜೊತೆ ಗಿದ್ದು ಮಾಡಿಸಿದನೆಂದು ಹೇಳಿದಾಗ, ತಾಯಿಗೆ ಗಾಬರಿಯಾಯಿತು. ತನ್ನ ಮುದ್ದು ಕಂದನನ್ನು ಅಪ್ಪಿಕೊಂಡು ದೃಷ್ಟಿ ನಿವಾಳಿಸಿದಳು. ಈ ಘಟನೆಯಿಂದ ನಡಿಲ್ಲಾಯ ಪರಿವಾರದಲ್ಲಿ ಸಂಭ್ರಮವೆನಿಸಿತು. ಮನೆ ಯಲ್ಲಿಯೇ ಪಾಠ ಪ್ರಾರಂಭವಾಯಿತು. ಉಪನಯನ ಮಹೋತ್ಸವ ಅನಂತರ ವಿಧ್ಯುಕ್ತ ಪಾಠ ಎಲ್ಲವೂ ಸಡಗರದಿಂದ ನಡೆಯಿತು. ಆಟ ಪಾಠಗಳಲ್ಲಿ ಮಲ್ಲನೆನಿಸುವ ವಾಸುದೇವನು ಉತ್ತಮ ಮಾತುಗಾರ, ಹನುಮನಂತೆ ಸಾಹಸಿ, ಭೀಮನಂತೆ ಶಕ್ತಿವಂತ ಎಲ್ಲರೊಡನೆ ಬೆರೆಯುವ ಗುಣವಂತನೆನಿಸಿದನು.

ವಾಸುದೇವನಿಗೆ ಹನ್ನೊಂದನೇ ವರ್ಷವಾದಾಗ ತಾಯಿ ಮಗನಿಗೆ ಮದುವೆ ಮಾಡುವ ಯೋಚನೆ ಮಾಡಿದಳು. ಆದರೆ ಮಗನು ಅದಕ್ಕೊಪ್ಪದೆ ಸನ್ಯಾಸದ ಬಯಕೆಯನ್ನು ಮುಂದಿಟ್ಟನು. ಆಗ ತಾಯಿಯು ಒಬ್ಬನೇ ಮಗನಾದ ನಿನ್ನನ್ನು ಹೇಗೆ ಸನ್ಯಾಸಿಯಾಗಲು ಬಿಡಲಿ ಎಂದು ಗೋಳಿಟ್ಟಾಗ ಒಪ್ಪಿದ ಮಗನು ಒಂದು ವರ್ಷ ಸುಮ್ಮನಾದನು. ಅಷ್ಟರಲ್ಲಿ ತಾಯಿಗೆ ಇನ್ನೊಬ್ಬ ಗಂಡುಮಗು ಜನಿಸಿದಾಗ ಮತ್ತೆ ತಾನು ಸನ್ಯಾಸಿಯಾಗಲು ಒಪ್ಪಿಗೆ ಬೇಡಿದನು. ತಂದೆ ತಾಯಿಯರನ್ನು ಒಪ್ಪಿಸಿ ಉಡುಪಿಯಲ್ಲಿದ್ದ ಅಚ್ಯುತಪ್ರಜ್ಞರೆಂಬ ಯತಿಗಳ ಬಳಿ ಬಂದು ತನ್ನ ಆಶಯವನ್ನು ಬಿತ್ತರಿಸಿದನು. ಮುಂದೆ ಅವರ ಶಿಷ್ಯತ್ವದಲ್ಲಿ ಸನ್ಯಾಸ ಸ್ವೀಕರಿಸಿ ಪೂರ್ಣಪ್ರಜ್ಞರೆಂಬ ನಾಮಾಂಕಿತ ರಾದರು. ಕೇವಲ ಒಂದು ತಿಂಗಳು ಕಳೆಯುವಷ್ಟರಲ್ಲಿ ತರ್ಕ ಕೋವಿದನಾದ ವಾಸುದೇವನೆಂಬ ವಿದ್ವಾಂಸನನ್ನು ಮಾತಿನಿಂದ ಮಣಿಸಿದರು. ಪೂರ್ಣಪ್ರಜ್ಞರ ವಾಕ್‌ಶಕ್ತಿಯನ್ನು ಕಂಡ ಗುರುಗಳು ಆನಂದತೀರ್ಥರೆಂಬ ಅಭಿದಾನವನ್ನಿತ್ತು ಹರಸಿದರು. ಸ್ವಲ್ಪ ಸಮಯ ದಲ್ಲಿ ಬುದ್ಧಿಸಾಗರನೆಂಬ ಬೌದ್ಧ ಪ್ರಚಾರಕನು ಆಚಾರ್ಯರಿಂದ ಸೋತನು.

ಸುತ್ತಮುತ್ತ ಆಚಾರ್ಯ ಮಧ್ವರೆಂದು ಪ್ರಸಿದ್ಧಿ ಪಡೆದ ಯತಿ ಗಳನ್ನು ಎಲ್ಲೆಡೆ ತುಂಬ ಗೌರವದಿಂದ ಕಂಡರು. ತೆಂಕಣಭಾರತ ಯಾತ್ರೆಯನ್ನು ಮುಗಿಸಿ ಉಡುಪಿಗೆ ಬಂದ ಮಧ್ವರು ಭಗವದ್ಗೀತೆಗೆ

ತಮ್ಮ ಭಾಷ್ಯವನ್ನು ರಚಿಸಿದರು. ಅದನ್ನು ಬದರಿಯಲ್ಲಿರುವ ಬಾದ ರಾಯಣರಿಗೆ ತೋರಿಸಬೇಕೆಂಬ ಹಂಬಲದಿಂದ ಗುರುವಿನ ಅನುಮತಿ ಯನ್ನು ಬೇಡಿದರು. ಗಂಗಾಸ್ನಾನಕ್ಕಾಗಿ ಉತ್ತರ ಭಾರತಕ್ಕೆ ತೆರಳುವ ಶಿಷ್ಯನ ಮನದಿಂಗಿತವರಿತ ಗುರುಗಳು ಎಳೆಯತಿಯಾದ ನೀನು ಭಾಗೀರಥಿಯನ್ನು ಉತ್ತರದ ಭಾಗದಲ್ಲೇ ಅರಸ ಬೇಕಿಲ್ಲ ಕರುಣಾ ಮಯಳಾದ ಆಕೆ ನಿನಗಿಲ್ಲಿಯೇ ದರ್ಶನ ಕೊಡುವ ಳೆಂದು ಹೇಳಿದರು. ಕೇವಲ ಮೂರು ದಿನಗಳಲ್ಲಿ ಉಡುಪಿಯ ದೇವಾಲಯ ಗಳ ಸಮೀಪದಲ್ಲಿ ಬಿಳಿಬಿಳಿ ನೊರೆಹಾಲಿನಂತೆ ಗಂಗೆ ಜಿನುಗಿ ಒಂದು ಸರೋವರವಾಯಿತು. ಊರ ಜನರು ಅದನ್ನು ಮಧ್ವತೀರ್ಥವೆಂದು ಗೌರವಿಸಿದರು.

ಮುಂದೆ ಉತ್ತರಭಾರತ ಪ್ರವಾಸವನ್ನೂ ಕೈಗೊಂಡು ಬದರಿ ಯಲ್ಲಿ 48 ದಿವಸ ನಿರಾಹಾರ ಮತ್ತು ಮೌನಗಳಿಂದ ಗುರುಧ್ಯಾನ ಮಾಡಿದರು. ಭಗವಾನ್ ವೇದವ್ಯಾಸರ ಅನುಗ್ರಹವನ್ನು ಪಡೆದು ತಮ್ಮ ಸಿದ್ಧಾಂತವನ್ನು ಗಟ್ಟಿಗೊಳಿಸಿದರು. ಜನರಿಗೆ ತತ್ತ್ವೋಪದೇಶ ವನ್ನು ಮಾಡಿದರು. ಮರಳಿ ಉಡುಪಿಗೆ ಬಂದು ಒಮ್ಮೆ ಮುಂಜಾನೆ ಸಮೀಪದ ಮಲ್ಪೆಯ ಕಡಲ ತಡಿಯಲ್ಲಿ ಸಂಚರಿಸುವಾಗ ಕಡಲಿನಲ್ಲಿ ಮುಳುಗಿದ ಹಡಗು ಮತ್ತು ಅದರಲ್ಲಿ ಹುದುಗಿರುವ ಕಡೆಗೋಲ ಕೃಷ್ಣ ಆಚಾರ್ಯರ ಜ್ಞಾನ ಚಕ್ಷುಗಳಿಗೆ ಗೋಚರವಾಯಿತು. ನಂತರ ಆಚಾರ್ಯರ ನಿರ್ದೇಶನದಂತೆ ಕಡಲಿನಿಂದ ವಿಗ್ರಹವನ್ನು ಎತ್ತ ಲಾಯಿತು. ಅಲ್ಲಿ ಸುಂದರ ಶ್ರೀಕೃಷ್ಣನ ಮೂರ್ತಿ ಗೋಚರಿಸಿತು. ಸಂಭ್ರಮದಿಂದ ಆ ಮೂರ್ತಿಯನ್ನು ಉಡುಪಿಗೆ ತಂದು ಪ್ರತಿಷ್ಠಾಪಿಸಿ ಪೂಜಾವಿಧಿಯನ್ನು ಬೋಧಿಸಿದರು. ಕಣ್ವತೀರ್ಥದಲ್ಲಿ ಒಮ್ಮೆ ಚಾತು ರ್ಮಾಸ್ಯಕ್ಕೆ ಕುಳಿತಾಗ ತಮ್ಮ ಎಂಟು ಜನ ಶಿಷ್ಯರನ್ನು ಕರೆದು ದ್ವಂದ್ವಪದ್ಧತಿಯಂತೆ ಎರಡೆರಡು ತಿಂಗಳು ಶ್ರೀಕೃಷ್ಣನ ಪೂಜೆಗೆಂದು ನೇಮಿಸಿದರು. ಮತ್ತೆ ಹಿಮಗಿರಿಯತ್ತ ಪ್ರಯಾಣ ಬೆಳೆಸಿದರು.

ಗೋದಾವರಿ ತೀರದಲ್ಲಿದ್ದ ಶೋಭನಶಾಸ್ತ್ರಿ ಎಂಬ ವಿದ್ವಾಂಸ ನನ್ನು ವಾದದಲ್ಲಿ ಸೋಲಿಸಿ ಶಿಷ್ಯನನ್ನಾಗಿಸಿಕೊಂಡರು. ಸಾಗುತ್ತಾ ಗಂಗಾತೀರವನ್ನು ತಲುಪಿದರು. ಆದರೆ ಆಗ ಗಂಗೆಯ ಉತ್ತರ ದಡ ದೆಹಲಿಯ ಜಲಾಲುದ್ದೀನ್ ಖಿಲ್ಜಿಯ ಆಡಳಿತಕ್ಕೆ ಸೇರಿತ್ತು. ಅನ್ಯರು ಗಂಗೆಯನ್ನು ದಾಟದಂತೆ ಆತನು ನಿರ್ಬಂಧಿಸಿದ್ದನು. ಆಜ್ಞೆಯನ್ನು ಉಲ್ಲಂಘಿಸಿದವರನ್ನು ಕೈಕಾಲು ಕತ್ತರಿಸಿ ಶಿಕ್ಷಿಸುತ್ತಿದ್ದನು. ಈ ವಿಷಯ

ತಿಳಿದರೂ ಬೆದರದ ಮಧ್ವರು ಸೈನಿಕರ ಪ್ರತಿರೋಧವನ್ನು ಲೆಕ್ಕಿಸದೆ ಗಂಗೆಯನ್ನು ದಾಟಿಯೇ ಬಿಟ್ಟರು. ದಡ ಸೇರಿದ ಯತಿಗಳನ್ನು ಬಂಧಿಸಿ ದೊರೆಯ ಮುಂದೆ ನಿಲ್ಲಿಸಲಾಯಿತು. ಶಿಕ್ಷಿಸುವ ಮತ್ತು ಮತಾಂತರಿಸುವ ಹವಣಿಕೆಯಲ್ಲಿದ್ದ ದೊರೆಯ ಮನಸ್ಸು ಪರಿವರ್ತನೆ ಯಾಯಿತು. ಆತ ಮಧ್ವರ ಸೇವೆಗೆ ಸಿದ್ಧನಾದ. ಅಲ್ಲಾಹನೆಂದರೂ ನಾರಾಯಣನೆಂದರೂ ಒಂದೇ, ನಾವೆಲ್ಲ ಒಬ್ಬನೇ ಭಗವಂತನ ಮಕ್ಕಳು, ಸೋದರ ಬಾಂಧವ್ಯವೇ ಅತ್ಯುತ್ತಮವಾದುದು ಎಂದು ಬೋಧಿಸಿ ಬದರಿಗೆ ತೆರಳಲು ಸಹಕರಿಸುವಂತೆ ಕೋರಿದರು. ದುರ್ಗಮವಾದ ಅರಣ್ಯದ ನಡುವೆ ಹೋಗುತ್ತಿರುವಾಗ ಕಳ್ಳರು ಆಕ್ರಮಿಸಿದರು. ಗುರುಗಳ ಸೂಚನೆಯಂತೆ ಎಲ್ಲರೂ ಸುಮ್ಮನೆ ಕುಳಿತು ಬಿಟ್ಟರು. ದೋಚಲು ಬಂದ ಕಳ್ಳರಿಗೆ ಕಲ್ಲುಬಂಡೆಗಳಂತೆ ಇವರೆಲ್ಲರು ಕಂಡರು. ಭಯಗೊಂಡ ಕಳ್ಳರು ನಿಲ್ಲದೆ ಓಡಿದರು. ಹೀಗೆ ಸಾಗು ತ್ತಿರುವಾಗ ಮತ್ತೊಮ್ಮೆ ಕೊಲೆಗಡುಕರ ತಂಡ ಎದುರಾಯಿತು. ಕೈಯಲ್ಲಿ ಕೊಡಲಿಗಳನ್ನು ಹಿಡಿದುಕೊಂಡಿದ್ದ ಕಟುಕರು ಗುರುಗಳನ್ನು ತಡೆದರು. ಆಗ ಹಿಂದುಮುಂದು ನೋಡದ ಆಚಾರ್ಯರು ಪಕ್ಕದಲ್ಲಿದ್ದ ಉಪೇಂದ್ರನೆಂಬ ಶಿಷ್ಯನನ್ನು ಕರೆದು ಇವರನ್ನು ವಿಚಾರಿಸಿಕೊಳ್ಳುವಂತೆ ಸೂಚಿಸಿ ಧ್ಯಾನಸ್ಥರಾದರು. ಗುರುವಿನ ಸೂಚನೆಯಿಂದ ಕೆರಳಿದ ಉಪೇಂದ್ರತೀರ್ಥರು ಕಟುಕನೊಬ್ಬನ ಕೈಯ ಕೊಡಲಿಯನ್ನು ಕಸಿದು ಕೊಂಡು ಕಟುಕರೆಲ್ಲರನ್ನು ಸವರಿದರು. ಮುಂದೆ ಗುರು ವೇದವ್ಯಾಸ ರಿಂದ ಅನುಗ್ರಹವನ್ನು ಪಡೆದು ಬದರಿಯ ಯಾತ್ರೆಯನ್ನು ಮುಗಿಸಿ ಶಿಷ್ಯವೃಂದದೊಂದಿಗೆ ಭಾರತದ ತೀರ್ಥಾಟನೆ ಮಾಡಿದರು. ಕಾಶಿ ಯಲ್ಲಿದ್ದ ಅಮರೇಂದ್ರಪುರಿಯೆಂಬ ವಿದ್ವಾಂಸನನ್ನು ಮಣಿಸಿದರು. ಮುಂದೆ ಕುರುಕ್ಷೇತ್ರದಲ್ಲಿ ಸಂಚರಿಸುವಾಗ ಒಂದು ಸ್ಥಳದಲ್ಲಿ ನೆಲ ವನ್ನು ಅಗೆಸಿ ಮಣ್ಣಿನೊಳಗಿದ್ದ ಭೀಮನ ಗದೆಯನ್ನು ಎಲ್ಲರಿಗೂ ತೋರಿಸಿ ಮತ್ತೆ ಮಣ್ಣಿಗೆ ಸೇರಿಸಿದರು. ಗೋವೆಯ ಪಶುಪೆ ಎಂಬಲ್ಲಿ ತನ್ನ ಸಂಗೀತದ ಮೋಡಿಯಿಂದ ಕೇಳುಗರನ್ನು ಮಂತ್ರಮುಗ್ಧ ರನ್ನಾಗಿಸಿದರು. ತತ್ವವಾದವನ್ನು ಬೋಧಿಸುತ್ತಾ ಜನರಿಗೆ ವೈದಿಕತೆಯ ತಿರುಳನ್ನು ವಿವರಿಸುತ್ತಾ ಸಾಗಿದರು. ಈ ಸಾಗುವಿಕೆಯಲ್ಲಿ ಕೊರಡನ್ನು ಕೊನರಿಸಿ ಬೃಹತ್ತಾದ ಬಂಡೆಗಲ್ಲನ್ನು ಒಂದು ಕರದಲ್ಲಿ ಎತ್ತಿಟ್ಟು ಶಕ್ತಿ ತೋರಿದರು. ತಮ್ಮ ಶಿಷ್ಯರಲ್ಲೊಬ್ಬರಾದ ನರಹರಿ ತೀರ್ಥರನ್ನು ಕರೆದು ಸಂಗೀತ ಮತ್ತು ನೃತ್ಯಗಳಿಂದ ಸಮ್ಮಿಳಿತವಾದ ಭಾಗವತ

ಕತೆಯನ್ನಾಧರಿಸಿದ ಯಕ್ಷಗಾನ ದಶಾವತಾರ ಭಾಗವತರಾಟವನ್ನು ಆಚರಣೆಗೆ ತಂದರು. ಅಶಿಕ್ಷಿತ ಜನಸಮುದಾಯಕ್ಕೆ ಈ ಮಾಧ್ಯಮ ದಿಂದ ಗುಣ ಮತ್ತು ಮೌಲ್ಯಗಳ ಶಿಕ್ಷಣ ದೊರೆಯುವಂತಾಯಿತು.

ತುಳುನಾಡಿನ ದೊರೆಯಾದ ಜಯಸಿಂಹನು ಕಾಸರಗೋಡಿ ನಲ್ಲಿ ಆಡಳಿತ ನಡೆಸುತ್ತಿದ್ದನು. ಮಧ್ವಾಚಾರ್ಯರ ಪ್ರಸಿದ್ಧಿಯನ್ನು ಕೇಳಿ ತನ್ನ ನಾಡಿಗೆ ಕರೆಸಿ ಪಾದಪೂಜೆ, ಭಿಕ್ಷ ಸೇವೆಯನ್ನು ನಡೆಸಲು ಸಿದ್ಧನಾದನು. ಈ ವಿಷಯ ತಿಳಿದ ಪದ್ಮತೀರ್ಥನೆಂಬ ಕಪಟ ಯತಿಯು ಮಧ್ವರ ಕುರಿತಾಗಿ ಮಾತ್ಸರ್ಯದಿಂದ ಕೊಡಿಂಜಾಡಿ ಸೋದರರೆಂಬ ಕೊಲೆಗಡುಕರನ್ನು ಮಧ್ವರನ್ನು ಹತ್ಯೆ ಮಾಡಲು ಕಳಿಸಿದನು. ಆ ಸೋದರರು ಉಡುಪಿಗೆ ಬಂದು ಮಧ್ವರನ್ನು ಮಲ್ಲರ ಪಂಥಕ್ಕೆ ಆಹ್ವಾನಿಸುವರು. ಮಧ್ವರ ಅನುಮತಿ ಪಡೆದು ಇಬ್ಬರೂ ಆಚಾರ್ಯರ ಕೊರಳನ್ನು ಹಿಚುಕತೊಡಗಿದರು. ಆದರೆ ಸೋದರರು ಅವರಿಗುಂಟಾದ ಸಂಕಟ, ತಳಮಳದಿಂದಾಗಿ ಬಸವಳಿದು ಕುಸಿದು ಬಿದ್ದರು. ನಂತರ ಗುರುಕೃಪೆಯಿಂದ ಮರುಜೀವ ಪಡೆದರು. ಜಯ ಸಿಂಹನ ಪ್ರಾರ್ಥನೆಯನ್ನು ಮನ್ನಿಸಿ ಕಾಸರಗೋಡಿಗೆ ಬರಲು ಗುರು ಗಳು ಒಪ್ಪಿಗೆ ಸೂಚಿಸಿದರು. ಈ ನಡುವೆ ಪದ್ಮತೀರ್ಥನು ಕಳ್ಳರಿಂದ ಆಚಾರ್ಯ ಮಧ್ವರ ಅಮೂಲ್ಯ ಪುಸ್ತಕಭಂಡಾರವನ್ನು ಅಪಹರಿಸಿ ದನು. ಅದನ್ನು ಪತ್ತೆ ಹಚ್ಚಲು ಜಯಸಿಂಹನು ನಡೆಸಿದ ತನಿಖೆ ಯಿಂದ ವಿದ್ವಾಂಸರಾದ ಶಂಕರಭಟ್ಟ ಮತ್ತು ಆಸ್ಥಾನ ಪಂಡಿತರಾದ ತ್ರಿವಿಕ್ರಮಾಚಾರ್ಯರ ಬಳಿ ಇರುವುದೆಂದು ತಿಳಿಯಿತು. ಉಪಾಯ ದಿಂದ ವಿದ್ವಾಂಸರ ವಾದಕೂಟವನ್ನು ಅರಸನು ವ್ಯವಸ್ಥೆಗೊಳಿಸಿದನು. ಏಳೆಂಟು ದಿನಗಳ ಕಾಲ ನಡೆದ ವಾದದಲ್ಲಿ ಈ ಹಿರಿಯ ವಿದ್ವಾಂಸ ರೆಲ್ಲ ಸೋತು ಯತಿಗಳಿಗೆ ಶರಣಾದರು. ತಮ್ಮ ಅಪರಾಧವನ್ನು ಕ್ಷಮಿಸಿರೆಂದು ಬೇಡುತ್ತಾ ಕದ್ದ ಪುಸ್ತಕಗಳನ್ನು ಮರಳಿಸಿದರು. ರಾಜ ಗುರುವಾದ ಪೆಜತ್ತಾಯ ತ್ರಿವಿಕ್ರಮ ಪಂಡಿತರು ಆಚಾರ್ಯ ಮಧ್ವರ ಶಿಷ್ಯರಾದರು.

ಕಾಸರಗೋಡಿನಲ್ಲಿ ಚಾತುರ್ಮಾಸವನ್ನು ಮುಗಿಸಿ ಅಲ್ಲಿಂದ ಉಜಿರೆಗೆ ಬಂದು ಶಿಷ್ಯರನ್ನುದ್ಧರಿಸಿ ಮುಂದೆ ಪಾಜಕವನ್ನು ಸೇರಿ ಧ್ಯಾನಾಸಕ್ತರಾದರು. ಹೃಷಿಕೇಶತೀರ್ಥ, ನರಸಿಂಹತೀರ್ಥ, ಜನಾರ್ದನ ತೀರ್ಥ, ಉಪೇಂದ್ರತೀರ್ಥ, ವಾಮನತೀರ್ಥ, ಶ್ರೀವಿಷ್ಣುತೀರ್ಥ, ಶ್ರೀರಾಮತೀರ್ಥ, ಶ್ರೀ ಅಧೋಕ್ಷಜತೀರ್ಥ ಮತ್ತು ಶ್ರೀಪದ್ಮನಾಭ

ತೀರ್ಥರೆಂಬ ಒಂಬತ್ತು ಮಂದಿ ಶಿಷ್ಯರಿಗೆ ಸನ್ಯಾಸದೀಕ್ಷೆಯನ್ನು ಕೊಟ್ಟು ನಿರಂತರ ಹರಿಪೂಜೆಯನ್ನು ನಡೆಸುವಂತೆ ಸೂಚಿಸಿದರು. ಮಾಘ ಶುದ್ಧ ನವಮಿಯಂದು ಉಡುಪಿಯ ಅನಂತಶಯನ ದೇವಾಲಯದಲ್ಲಿ ಪ್ರವಚನವನ್ನು ಮುಗಿಸುವಾಗ ಪುಷ್ಪವೃಷ್ಟಿಯಾಯಿತು. ಒಂದು ತುಳಸಿಮಾಲೆಯು ಗುರುಗಳನ್ನು ಸುತ್ತುವರೆಯಿತು. ಆಮೇಲೆ ಗುರುಗಳನ್ನು ಕಂಡವರಿಲ್ಲ. ಅವರು ಬದರಿಗೆ ತೆರಳಿ ಗುರುಸಾನ್ನಿಧ್ಯದಲ್ಲಿ ನೆಲೆಸಿದರು.

– ಸದಾನಂದ

ಆಚಾರ್ಯ ಶ್ರೀಮಧ್ವಚರಿತ

ವಾರ್ಧಕ ಷಟ್ಪದಿ

ಶ್ರೀಕೃಷ್ಣನೊಲಿವಂತೆ ಹರಸೆಮಗೆ ವಿಘ್ನೇಶ ।
ಸುಕೃತಿಯಲೊದಗುತ್ತ ಬರುವಂತೆ ಶಾರದೆಯ ।
ವಕ್ರತುಂಡನೆ ನಿನ್ನ ಪ್ರೇಮ ಪ್ರವಾಹದಲಿ ಸುಜನರನು ನಲಿದಾಡಿಸು ॥
ಈ ಕಥೆಯು ಶ್ರೀಮಧ್ವಚರಿತ ಭಕ್ತಿಯ ಸತ್ತ್ವ ।
ಶಕ್ತಿ ಮೆರೆಸಿದ ತತ್ತ್ವವಾದವನು ಮೊಳಗಿಸಿದ ।
ಲೋಕ ಪೊಗಳಿದ ಕೀರ್ತಿವಂತರನು ವರ್ಣಿಸಲ್ಕಸದಳವಿದಲ್ಪ
ಯತ್ನ ॥ ॥ ೧ ॥

ಸುರುಟಿ – ಏಕತಾಳ

ಯಕ್ಷಗಾನಪ್ರಿಯನೇ । ಸುಜನರ । ರಕ್ಷಿಸುತಿರುವವನೇ ॥
ಲಕ್ಷಣವರಿಯದ ಪಾಮರರಿಗೆ ನೀ ।
ಶಿಕ್ಷಣವೊದಗಿಸುತಿರುವ ಸುರಕ್ಷನೆ ॥
ಅಕ್ಷಿ ತೆರೆದು ನೋಡು । ತಕ್ಷಣ । ವೀಕ್ಷಿಸಿ ದಯೆಮಾಡು ॥
ಯಕ್ಷರಕ್ಷೆ ದುರ್ಜನರ ಶಿಕ್ಷೆಯಾಕಾಂಕ್ಷೆಯಲೇ ಮಾಡು ।
ಸಂ । ರಕ್ಷಿಸಿ ಕಾಪಾಡು । ದುಷ್ಟ ವಿಪತ್ತನು ಹೊರದೂಡು ॥ ॥ ೨ ॥

ಕಾಂಬೋದಿ – ಝಂಪೆತಾಳ

ನಾಕಮಂದಿರದಿ ಶಚಿಪತಿಯು ತಾನನಿಮಿಷರ ।
ಸಾಕಾರದಲಿ ಸಭೆಯ ಸೇರಿ ಚರ್ಚಿಸಿದ ।
ಲೋಕ ವ್ಯವಹಾರದಲ್ಲಿರುವ ಕುಂದೇನು ।
ನಾಕ ಸಂಕಟ ಕಾರಣಂಗಳಿಹುದೇನು ॥ ೩ ॥

ಭಜನ್ (ಆಹೇರಿ– ಏಕತಾಳ)

ಜಯ ಜಯ ನಾರಾಯಣ । ನಾರಾಯಣ ।
ಜಯ ಜಯ ನಾರಾಯಣ ॥

ಜಯ ಸಂಕಟ ಹರಣ ।
ಜಯತು ವೆಂಕಟರಮಣ ।
ಜಯ ಜಯ ನಾರಾಯಣ ॥
ಭಯ ನಿವಾರಣ । ನಿಯಮ ಕಾರಣ ।
ಜಯವೆನ್ನುತ ನಾರದ ಮುನಿಪ ॥ ॥ ೪ ॥

ಬಿಲಹರಿ – ಅಷ್ಟತಾಳ

ಬರವನು ಕಾಣುತ ಸುರಪ । ಬಲು ।
ಹರುಷದಿ ಪೀಠವನೇರಿಸುತ ॥
ವರಮುನಿಪನೆ ನೀ ಬಂದಿಹ ಕಾರಣ ।
ವರುಹೆನೆ ನಗುತಲೆ ನುಡಿದನು ನಾರದ ॥ ॥ ೫ ॥

ಕೇದಾರಗೌಳ – ಅಷ್ಟತಾಳ

ಲಾಲಿಸು ಸುರಪಾಲ ಹೇಳುವ ಹದನವ ।
ಕಾಲ ಕಲಿಯದಿದೆ ವೇಳೆ ಕಳೆಯುತಿದೆ ॥
ಹಾಳು ಮಾಡಿದ ಜನ್ಮ । ಗೋಳಿಗಲ್ಲದೆ ಮುನ್ನ ।
ದೇಳಿಗೆಯನು ತಾ । ತಾಳುವುದೇನನ್ನ ॥ ॥ ೬ ॥

ತೋಡಿ – ರೂಪಕತಾಳ

ಏನ ಹೇಳುವಿರಿ ನಾನೇನ ಮಾಡುವುದಿದಕೆ ।
ದಾನವಾರಿಯ ಮನದೊ । ಳೇನದಡಗಿಹುದೋ ।
ತಾನು ಗೈಯುವುದೇನದೆಂಬುದನು ಹೇಳಿರಿ ।
ನ್ನೇನು ಸಂಗತಿಯೆಂದು ಲೀಲೆಯೊಳಗರುಹಿ ॥ ॥ ೭ ॥

ಕಾಂಬೋದಿ – ಝಂಪೆತಾಳ

ಸತ್ತ್ವ ರಜ ತಾಮಸದ ಗುಣವೃದ್ಧಿಯಾಗುತಿದೆ ।
ಆತ್ಮ ಪರಮಾತ್ಮ ಸಂಕೀರ್ತನೆಗಳಿಲ್ಲ ॥
ಸಾತ್ತ್ವಿಕರು ಲೌಕಿಕದ ಕರ್ಮಗಳ ತ್ಯಜಿಸಿದರೆ ।
ಸತ್ಯ ಸನ್ಮಾರ್ಗಗಳ ಸಂಪದಗಳಿಲ್ಲ ॥ ॥ ೮ ॥

ತೋಡಿ – ರೂಪಕತಾಳ

ಅಹುದಹುದು ಹೀಗೆಂದ ಮಾತಿಗೊಪ್ಪುವೆ ನಾನು ।
ಗಹನ ಚಿಂತೆಗೆ ತಾವೆನ್ನ ದೂಡಿದಿರಿ ।
ವಹಿಲದುನ್ನತಿಗೇನ ಗೈಯಲೆನುತಿರಲಿಕಾ ।
ಗಿಹುದೊಂದು ದಾರಿಯೆಂದೊರೆದ ಮುನಿಪತಿಯು ॥ ೯ ॥

ಬಿಲಹರಿ–ಅಷ್ಟತಾಳ

ಕೂಡುತ್ತ ನಾವೆಲ್ಲ ಹರಿಯಾ । ಇಂದು ।
ಬೇಡುವ ಲೋಕದ ಸಂಪದ ಸಿರಿಯಾ ॥
ಮೋಡಿಗೊಳ್ಳುವ ದೇವ ಚರಿತ । ಮುಂದೆ ।
ರೂಢಿಗಮಿತವಾದುದನುಪಮ ಗುರುತ ॥ ॥ ೧೦ ॥

ಭಾಮಿನಿ ಷಟ್ಪದಿ

ಎಂದು ಮುನಿಪತಿ ಸೂಚಿಸಲು ಸುರ ।
ವೃಂದವೇ ವೈಕುಂಠ ಪುರದೆಡೆ ।
ಬಂದು ಭಜಿಸಲು ನೀಲಮೇಘ ಶ್ಯಾಮನನು ಸತತ ॥
ಇಂದಿರಾಧವನೊಲಿದ ಕರುಣದೊ ।
ಳೊಂದುದಿನ ದರುಶನವನೀಯುತ ।
ಕುಂದುಗಳದೇನೆಂದು ಬೆಸಗೊಳಲೆಂದರೆಲ್ಲರು ಮಣಿಯುತ ॥ ೧೧ ॥

ಕಾಂಬೋದಿ – ಝಂಪೆತಾಳ

ಕಲಿಯಟ್ಟಹಾಸದಲಿ ಸೊರಗುತಿದೆ ಮನುಕುಲವು ।
ಇಳೆಯೊಳಗೆ ಹರಿನಾಮ ಕೀರ್ತನೆಗಳಿಲ್ಲ ॥
ಬಲ ಛಲಗಳಿಂದ ಸೊಕ್ಕಿದ ಜೀವಸಂಕುಲಕೆ ।
ನಳಿನನಾಭನೆ ನಿನ್ನ ಲೀಲೆ ತಿಳಿದಿಲ್ಲ ॥ ॥ ೧೨ ॥

ನೀನುಳಿಸು ಹದಿನಾಲ್ಕು ಲೋಕಗಳ ಸಂಚಲನ ।
ಮಾನವಂತರಿಗಭಯವೀಯುವಂತೆ ॥
ದಾನ ಜ್ಞಾನದ ಮಹಿಮೆಯನವರತ ನಿಲುವಂತ ।
ದೇನು ಗೈಯುವುದೆಂದು ಹೇಳು ಮುಂತೆ ॥ ॥ ೧೩ ॥

ಕಾನಡ – ರೂಪಕ

ಶೇಷಶಾಯಿ ನಗುತ ನುಡಿದ ವ್ಯಸನವೇತಕೆ । ಧರ್ಮ ।
ನಾಶವಾಗದೆಂಬ ನಿಜವನರಿಯದಿಹುದಕೆ ॥
ಬೇಸರಿಸಲುಪಾಯವೇಕೆ । ತೋಷಗೊಳಿಸಲೆಣಿಸಬೇಕೆ ।
ದೋಷವಿಲ್ಲದಂತೆ ಗ್ರಹಿಕೆ । ಲೇಸದಲ್ಲವೆ ॥ ॥ ೧೪ ॥

ಕಾಂಬೋದಿ – ಝಂಪೆತಾಳ

ಈ ಪಂಚ ಭೂತಗಳು ಪಂಚ ತನ್ಮಾತ್ರೆ ಮ ।
ತ್ತೀ ಪಂಚಕೋಶಗಳು ಪಂಚೇಂದ್ರಿಯಗಳು ॥
ಪ್ರಾಪಂಚವೆಂಬುದು ಜಡ ಪಂಚಕೃತವಾಗಿಹುದ ।
ದೀ ಪಂಚಮುಖದೊಳಗೆ ಪ್ರಾಣ ತುಂಬಿಹುದು ॥ ೧೫ ॥

ಪ್ರಾಣವೆಂಬುದು ಪಂಚರೂಪದಲಿ ನಿರ್ವಹಿಸಿ ।
ಕಾಣುತೊಂದೆರಡಲ್ಲವೆರಡದೊಂದಲ್ಲ ॥
ಕಾಣುವುದು ತನ್ನ ತಾ ಪೂರ್ಣಾಭಿವ್ಯಕ್ತಿಯಲಿ ।
ಜ್ಞಾನಗಮ್ಯನ ತಿಳಿವು ಮೋಕ್ಷ ಬೇರಿಲ್ಲ ॥ ॥ ೧೬ ॥

ಕರ್ಮದೊಳಗಾಸಕ್ತಿ ಫಲಗಳಲಿ ನಿರ್ಲಿಪ್ತಿ ।
ಧರ್ಮವೆಂಬುದಕಾನು ಬರಿ ಸಾಕ್ಷಿ ಮಾತ್ರ ॥
ಮರ್ಮವೆಲ್ಲವನು ಬಲ್ಲವನು ತಾನಿಹನೊಬ್ಬ ।
ನೆಮ್ಬ ಸತ್ಯಗಳರಿವು ಬಲು ಸರಳ ಸೂತ್ರ ॥ ॥ ೧೭ ॥

ದೇವತೆಗಳೆಜಮಾನ ಸಾವಿರದ ಲೋಕವಿದು ।
ನೀವಿರುವುದೆಂತು ಜೀವರ ಕರ್ಮವಿರದೆ ।
ದೇವೋತ್ತಮನ ಕರುಣೆಗಾಗಿ ನಿಮ್ಮೊಳಗಿರುವ ।
ಜೀವೋತ್ತಮನ ಕರೆದು ಕಳುಹು ನಿಲದೆ ॥ ॥ ೧೮ ॥

ಜೀವವನು ಭಗವಂತನೆಡೆಗೆ ಸಂಯೋಜಿಸುವ ।
ಸುವ್ಯವಸ್ಥೆಗೆ ಸೂತ್ರ ಜೀವೋತ್ತಮ ॥
ಸಾವಧಾನದೊಳಿಳೆಯೊಳಿಳಿಯುತಲಿ ಪರತತ್ತ್ವ ।
ದಾ ವಿಶೇಷವ ತೋರೊ ತತ್ತ್ವೋತ್ತಮ ॥ ॥ ೧೯ ॥

ರೀತಿಗೌಳ – ಏಕತಾಳ

ಪುರುಷೋತ್ತಮನ ವಚನವ ಕೇಳಿ । ನಿರ್ಜರರೊಳು ।
ಮರುತನು ಮುದತಾಳಿ ॥
ದೊರೆ ನಿನ್ನೊಲುಮೆಯದಿದ್ದರೆ ಧರೆಯಲಿ ।
ಹರಿ ಸಂಕೀರ್ತನೆ ಮೊಳಗಿಸಿ ತೋರುವೆ ॥ ॥ ೨೦ ॥

ಕಲ್ಯಾಣಿ – ಝಂಪೆತಾಳ

ಇತ್ತ ಬೆಳ್ಳೆಯ ಗ್ರಾಮ ಕಡಲತಡಿಯೊತ್ತಿನಲಿ ।
ಸುತ್ತ ಕಲ್ಬಂಡೆಗಳ ಸೋಜಿಗವಿದೆ ॥
ನಟ್ಟ ನಡು ಚಿಕ್ಕ ತೊರೆ ಪಡು ಮೂಡು ಹಳ್ಳಿಗಳ ।
ಚಿತ್ರಿಸಿರೆ ಪಡುವಣದಿ ಪಾಜಕವಿದೆ ॥ ॥ ೨೧ ॥

ಭೈರವಿ – ಝಂಪೆತಾಳ

ಬಂಡೆ ಬೆಟ್ಟದ ಮೇಲೆ ಪರಶುರಾಮನ ಗುಡಿಯು ।
ಚಂಡಿ ದುರ್ಗೆಯ ನೆಲೆಯು ಕುಂಜಾರು ಗಿರಿಯು ॥
ಕಂಡರದು ಬಲು ರಮ್ಯ ಪಾಜಕ ವಿಹಂಗಮವು ।
ಗುಂಡು ಕಲ್ಲುಗಳೊಡನೆ ಹಸಿರು ಸಿರಿಯು ॥ ॥ ೨೨ ॥

ಸುರುಟಿ – ಏಕತಾಳ

ಅಲ್ಲಿ ನಡಿಲ್ಲಾಯ । ಮನೆತನ ।
ದಲ್ಲಿಹ ಔದಾರ್ಯ ॥
ಹಳ್ಳಿಯಲೆಲ್ಲೆಡೆ ಮನೆಮಾತಲಾ ।
ಬಳ್ಳಿಯಲೀ ನಾರಾಯಣ ಭಟ್ಟರು ॥ ॥ ೨೩ ॥

ಸತಿಯಹ ಸತ್ಯವತಿ । ಗರ್ಭದಿ ।
ಸುತನಿರೆ ಪುಣ್ಯವತಿ ॥
ಅತಿ ಸಂಭ್ರಮ ಕುಲಪುರುಷನ ದೊರಕಿಸಿ ।
ಹಿತ ನೀಡುವಳೆಂಬಾಶಯ ಪತಿಯದು ॥ ॥ ೨೪ ॥

ಅಠಾಣ – ಝಂಪೆತಾಳ

ಶುಭವಿಲಂಬಿಯ ಶರದ ಋತುವಿನಾಶ್ವಿನದಲ್ಲಿ ।
ನಭ ಶುಭ್ರವಾಗಿರುವ ವಿಜಯದಶಮಿಯಲಿ ॥
ಶುಭಲಗ್ನ ಶುಭವಾರ ನಕ್ಷತ್ರಯೋಗದಲಿ ।
ಶುಭ ಜನನವಾಯಿತಾಗಿಳೆಗೆ ನಳನಳಿಸಿ ॥ ॥ ೨೫ ॥

ನಾದನಾಮಕ್ರಿಯೆ – ಅಷ್ಟತಾಳ

ಉಡುಪಿಯಲಿರುವ ಭುಜಗಶಯನನನು ।
ಕಡುವ್ರತದೊಳಗಾರಾಧಿಸಲು
ಮೃಡಹರಿ ಲಿಂಗದ ಸೇವೆಯ ಪುಣ್ಯದಿ ।
ಪಡೆದಿಹ ಕಂದನಿಗತಿಚೆಲುವು ॥ ॥ ೨೬ ॥

ಮಗನಿಗಂಕಿತ ವಾಸುದೇವ ।
ಜಗ ಬೆರಗಾಗುವ ತೆರ ಧೀರ ॥
ನಗುಮೊಗದಲಿ ಎಲ್ಲರ ಸೆಳೆಯುವನು ।
ಬಗೆಗಣ್ಣಿನಲೆಲ್ಲವ ಬೋಧಿಪನು ॥ ॥ ೨೭ ॥

ಕೇದಾರಗೌಳ – ಝಂಪೆತಾಳ

ಮನೆತನದ ನಿಡಿಯೂರ ಬಂಧುಗಳ ಮನೆಗೊಮ್ಮೆ ।
ಜನಕನೊಟ್ಟಿಗೆ ಪೋದನು ॥
ಘನತರದ ಸಂಭ್ರಮದೊಳೆಲ್ಲರಿರುತಿರುವಾಗ ।
ಮನೆಯಾಚೆಗಿವನೈದನು ॥ ॥ ೨೮ ॥

ಮೂರು ವರ್ಷದ ಪೋರನೆಲ್ಲೆಲ್ಲು ಕಾಣಿಸನು ।
ದಾರಿಹೋಕರ ಕೇಳುತ ॥
ಕೇರಿಕೇರಿಗಳಲ್ಲಿ ಕಾನಂಗಿ ತಾಳೆಕುಡೆ ।
ಯೂರುಗಳ ಹುಡುಕಾಡುತ ॥ ॥ ೨೯ ॥

ಬಂಧುಗಳು ನೇಹಿಗಳು ಕಾಡುಗದ್ದೆಗಳಲೆದು ।
ಕಂದನಿಲ್ಲದೆ ಬಳಲಿರೆ ॥

ಮುಂದೆ ಬರುತಿಹರುಡುಪಿಯೆಡೆಗೆ ತೋರಿಸಲಲ್ಲಿ ।
ಚೆಂದದಲಿ ಮಗು ನಗುತಿರೆ ॥ ॥ ೩೦ ॥

ಧನ್ಯಾಸಿ – ಏಕತಾಳ

ಎಂತು ಬಂದೆಯೋ ಕಂದನೇ । ನಿನಗೆ ದಾರಿ ।
ಯೆಂತು ತಿಳಿಯಿತೋ ಬಾಲನೇ ॥
ಮುಂತಾಗಿ ನಡೆದು ಬಂದಿಹ ಬಟ್ಟೆಯಲ್ಲವಿ ।
ದೆಂತು ಸಾಹಸವೆಂಬುದೆಮಗೀಗ ಪೇಳಯ್ಯ ॥ ॥ ೩೧ ॥

ಕೇದಾರಗೌಳ – ಝುಂಪೆತಾಳ

ಭಗವಂತ ಜೊತೆಗಿದ್ದನು । ಎನ್ನೊಡನೆ ।
ನಗುನಗುತ ಬರುತಿದ್ದನು ॥
ಹೊಗಿಸಿ ಕಾನಂಗಿಯಲಿ ಹರಹರಿಯ ತೋರಿಸುತ ।
ಮಿಗಿಲಾದ ತಾಳೆಕುಡೆ ಮಹಲಿಂಗ ದರ್ಶನವ ।
ಸೊಗಸಿನಲಿ ಚಂದ್ರಮೌಳೀಶ್ವರನನುಡುಪಿಯಲ್ಲೆ ।
ನಗೆನುತ ನಾಗಮಂಚನ ದಿವ್ಯರೂಪ ॥ ॥ ೩೨ ॥

ಬಿಲಹರಿ – ಝುಂಪೆತಾಳ

ತಬ್ಬಿಕೊಂಡಳು ಮಾತೆ ಮತ್ತೆನ್ನ ತೊರೆಯದಿರು ।
ಹುಬ್ಬು ಮೂಡದ ಮುದ್ದು ಬಾಲ ॥
ಹೆಬ್ಬಯಕೆ ನೀ ಕಂದ ದೃಷ್ಟಿ ತಾಗಿಹುದೆನುತ ।
ಲುಬ್ಬಿದಳುವಲಿ ತೊಳೆಯುತ ॥ ॥ ೩೩ ॥

ಮಾಂಡ್ – ಏಕತಾಳ

ಬೆರಗಾಯಿತು ಪರಿವಾರದ ಪರಿಸರ ।
ವರಿವಾಯಿತು ಹಿರಿತಲೆಗತಿಯವಸರ ।
ಹರುಷದೊಳುಪನಯನೋತ್ಸವ ಸಡಗರ ।
ವಿರಚಿಸಿ ವಿದ್ಯಾಭ್ಯಾಸವ ಸರಸರ ॥ ॥ ೩೪ ॥

ಆಟದ ಜೊತೆ ದಿನ ಪಾಠದಿ ಮಲ್ಲನು ।
ಕೂಟದೊಳೆಲ್ಲರ ಮೀರಿಸುವ ॥
ನೋಟದಲೇ ಜನ ಮನಸನರಿಯುವನು ।
ಚಾಟಿಯ ಮಾತಲಿ ಬಳಲಿಸುವ ॥ ॥ ೩೫ ॥

ಹಾಡಿದರೆಲ್ಲರ ಮೆಯ್‌ಮರೆಸುವ ಹೋ ।
ರಾಡಿದರಲ್ಲಿವ ಹನುಮಂತ ॥
ಝಾಡಿಸಲಾ ಕಲಿಭೀಮನ ಪರಿಯೊಳ ।
ಗಾಡುತ ನಲಿಯುವ ಗುಣವಂತ ॥ ॥ ೩೬ ॥

ನವರೋಜು – ಏಕತಾಳ

ಆಯಿತು ಹನ್ನೊಂದನೆ ವರುಷ । ಆ ।
ತಾಯಿಗೆ ಸಂಭ್ರಮ ಹರುಷ ॥
ಪಾಯವು ಸಂಸಾರಕೆ ಸತಿಸುತರೆನ ।
ಲಾಯವರಿತ ಜಗ ಮನೆ ತನಗೆಂದನು ॥ ॥ ೩೭ ॥

ತುಜಾವಂತು – ಝಂಪೆತಾಳ

ತನಯ ನೀನೊಬ್ಬನಿಹೆ ಕೊಡಲೆಂತೊ ದೇವಾರ್ಪಣ ।
ನೀನಗಲಿದರೆ । ಕೊನೆಗೆಮಗೆ ಗತಿಯಿರದು ತಿಲತರ್ಪಣ ॥
ಸನುಮತವು ನಿನಗಿದುವೆ ಜನನಿ ಜನಕರ ಬಿಡದೆ ।
ಮನಮಾಡದಿರು । ಮತ್ತೆ ಕಾಷಾಯದಾಕರ್ಷಣ ॥ ೩೮ ॥
(ಗಣಿಸದಿರು ಕಾಷಾಯದಾಕರ್ಷಣ)

ಭಾಮಿನಿ ಷಟ್ಪದಿ

ಎಂದು ಬೇಡುವ ಮಾತೆಗೊಪ್ಪಿಗೆ ।
ಗೆಂದ ಸರಿ ನಾನೊಬ್ಬನಾಗಿಹೆ ।
ಮುಂದೆ ನಿಮಗಿನ್ನೊಬ್ಬನುದಿಸಲು ಮತ್ತೆ ತೊಡಕಿಲ್ಲ ॥
ಒಂದು ವತ್ಸರ ಕಳೆಯಲಾಗಲೆ ।
ಗಂಡು ಮಗು ಸಂಜನಿಸೆ ಮಾತೆಗೆ ।
ಬಂದು ವಂದಿಸುತಪ್ಪಣೆಯ ಕೊಡಿರೆಂದು ಕೇಳಿದನು ॥ ೩೯ ॥

ಮಧ್ಯಮಾವತಿ – ತ್ರಿವುಡೆತಾಳ

ಮತಿಯುತರನೊಪ್ಪಿಸುತ ಬಾಲಕ ।
ಪಿತಗೆ ಮಾತೆಗೆ ನಮಿಸುತೋರ್ವನೆ ।
ಸತತ ನಡೆವುತಲರಸುತಿರೆ ಗುರು । ಪ್ರಾಜ್ಞರ
ಚ್ಯುತ ದೊರಕಲು ॥ ॥ ೪೦ ॥

ವಟುವು ಬಂದಡಿಗೆರಗಿ ನಿಂದಿರೆ ।
ಹಿತ ನುಡಿಗಳಿಂದಾರು ನೀನೆನ ।
ಲತಿ ಹರುಷದೊಳಗುಬ್ಬಿ ಗುರುವಿಗೆ ।
ನಮಿಸುತವನಿಂತೊರೆದನು ॥ ॥ ೪೧ ॥

ಸಾರಂಗ – ಅಷ್ಟತಾಳ

ಲಾಲಿಸು ಮಹನೀಯ । ಸತ್ಯವ ದಯ ।
ಪಾಲಿಸು ದಯನೀಯ ॥
ಬೀಳುವ ಜೀವಿಯ । ಮೇಲೆತ್ತುವ ಬಗೆ ।
ಪೇಳ್ವಿರೆ ನೀವೀ । ಬಾಲಕಗೆಂದನು ॥ ॥ ೪೨ ॥

ಸುರುಟಿ – ಏಕತಾಳ

ಬಲವಿರಬೇಕದಕೆ । ತಿಳಿಯುವ ।
ಛಲ ಮೊದಲಿನದಿದಕೆ ॥
ಎಳೆವರೆಯದ ನಿನಗಿದು ನಿಲುಕದುದೈ ।
ಸುಲಭದ ಸಾಧನೆಗಳನಾಧರಿಸಿಕೊ ॥ ॥ ೪೩ ॥

ಸಾರಂಗ – ಅಷ್ಟತಾಳ

ಇದಕಿಂತ ಸುಲಭವುಂಟೆ । ಗುರುದೇವ ।
ಪದವಿಗಳು ಬೇರೆ ನಂಟೆ ॥
ಸದಮಲಾತ್ಮಕನಾದ ಶ್ರೀಹರಿ ಪದವಿರದೆ ।
ಹುದುಗಿದಾಸೆಗಳೆಲ್ಲ ಮುದವಪ್ಪುದೆ ಪೇಳಿ ॥ ॥ ೪೪ ॥

ಅಠಾಣ – ಝುಂಪೆತಾಳ

ಮೋಹ ಮಮತೆಗಳಿಲ್ಲ । ದಾಹ ಬೇಸರವಿಲ್ಲ ।
ಈ ಹಸುಳೆಗೀತೆರದ ವೈರಾಗ್ಯವೇಕೆ ॥
ಬಾಹುಗಳ ತಕ್ಕೈಸಿ । ನೇಹದಲಿ ನೇವರಿಸಿ ।
ಸಾಹಸವಿದೆಂದೆನುತ ಸಂತೋಷಕೆ ॥ ॥ ೪೫ ॥

ರೀತಿಗೌಳ – ಅಷ್ಟತಾಳ

ಮೆಚ್ಚುವನಚ್ಯುತನಚ್ಚರಿಗೆ । ನಿ ।
ನ್ನಿಚ್ಛೆಗೆ ಹೆಚ್ಚಿನ ಕೆಚ್ಚೆದೆಗೆ ॥
ಉಚ್ಚತಮನು ನೀನೆಚ್ಚರವಾಗಿಹ ।
ನಚ್ಯುತಪ್ರಜ್ಞರ ನೆಚ್ಚಿಗನೆನಿಸಿದೆ ॥ ॥ ೪೬ ॥

ಕಾಪೀ – ರೂಪಕತಾಳ

ಪೂರ್ಣಪ್ರಜ್ಞರೆಂಬ ಪದವ ।
ಕರ್ಣಗಳಲಿ ಕೇಳಿ ಸುಖಿಸಿ ।
ಸನ್ನಿಧಾನದಿಂದ ಪಡೆದು ಧನ್ಯ ಯತಿಗತಿ ॥ ॥ ೪೭ ॥

ಸಾವೇರಿ – ಝುಂಪೆತಾಳ

ಮಾಸವೊಂದುರುಳಿರಲು ಉದ್ದಾಮ ಪಂಡಿತನು ।
ವಾಸುದೇವಕನೆಂಬ ತರ್ಕಕೋವಿದನು ॥
ದೇಶಂಗಳನು ಸುತ್ತಿ ವಿದ್ವಾಂಸರನು ತ ।
ನ್ನಾಸೆಯಲಿ ಸೋಲಿಸುತ್ತುಡುಪಿಗೈತರಲು ॥ ೪೮ ॥

ನವರೋಜು – ಏಕತಾಳ

ಬಲ್ಲಿದರಿದ್ದರೆ ಬನ್ನಿ । ಇರ ।
ದಿಲ್ಲದಿರೇ ಸೋಲೆನ್ನಿ ॥
ಕೇಳುತಲೀ ಹೇಳಿಕೆಗಳನಳ್ಳೆದೆ ।
ಯುಳ್ಳವರೆಲ್ಲರು । ನಿಲ್ಲದೆಯೋಡಿರಿ ॥ ॥ ೪೯ ॥

ಬಲ್ಲಿದ ಪಂಡಿತ ನಿಲ್ಲೋ । ನೀ ।
ನಿಲ್ಲದೆ ಗೆಲ್ಲುವುದೆಲ್ಲೋ ।
ಮಲ್ಲರ ತೆರದಲಿ ಮಧ್ವರು ಕರೆಯಲು ।
ಸೊಲ್ಲಡಗಿದುದ್ಕೈ । ಕೇಳುತಲಾತಗೆ ॥ ॥ ೫೦ ॥

ಮೋಹನ – ಅಷ್ಟತಾಳ

ತರ್ಕದಿಂದಲೆ ಸತ್ಯವಿಲ್ಲ । ಅರ್ಥಾ ।
ನರ್ಥದ ಜ್ಞಾನವಿರದೆ ಹುರುಳಿಲ್ಲ ॥
ಅರ್ಥಮಾತ್ರವು ತರ್ಕದಿಂದ । ಮ ।
ತ್ತರ್ಥ ದೊರೆವುದು ಸತ್ಯದಾನಂದದಿಂದ ॥ ॥ ೫೧ ॥

ತರ್ಕವಿಲ್ಲದ ವಾದ ವ್ಯರ್ಥ । ಸೂತ್ರ ।
ಛಿದ್ರವಾದರೆ ಪಟದ ಸ್ಪರ್ಧೆಗೇನರ್ಥ ॥
ಅರ್ಥವೆಂಬುದು ಸಂಪಾದನೆಗೆ । ಅದುವೆ ।
ಪೂರ್ತಿಯಾದರೆ ಮಹದಾನಂದ ಫಳಿಗೆ ॥ ॥ ೫೨ ॥

ಭೈರವಿ – ಝಂಪೆತಾಳ

ಆಯಿತದಕೇನೆನುತಲೀ ಯತಿಯು ಮುಂದಾಗು ।
ತಾಯ ತಪ್ಪಿತು ಸೊಕ್ಕು ಮಾಯವಾಗಿ ॥
ವಾಯುಸಂಭವರಂತೆ ಕಂಗೊಳಿಸೆ ಭಯದಿಂದು ।
ಪಾಯವಿಲ್ಲದೆ ಸೋತನವನು ಶರಣಾಗಿ ॥ ॥ ೫೩ ॥

ಪುನ್ನಾಗತೋಡಿ – ಏಕತಾಳ

ಹನ್ನೊಂದರ ಯತಿ ಪೂರ್ಣಪ್ರಜ್ಞರಲಿ ।
ಹಣ್ಣಾದನು ಪಂಡಿತವರನು ॥
ಇನ್ನೇನೆನ್ನುವುದರಿಯದೆ ಸೋತನು ।
ಧನ್ಯ ಧನ್ಯ ಧನ್ಯಾತ್ಮಕನು ॥ ॥ ೫೪ ॥

ಭಾಮಿನಿ ಷಟ್ಪದಿ

ಸಂಭ್ರಮಿಸಿ ಗುರುದೇವ ಹೆಚ್ಚಿನ ।
ನಂಬುಗೆಗೆ ತಾನೆದ್ದು ನುಡಿದರು ।

ಹಂಬಲಿಸುತೀರ್ದೆನಿವನಹುದಾನಂದತೀರ್ಥ ದಿಟ ॥
ಹುಂಬತನದಲಿ ಬುದ್ಧಿಸಾಗರ ।
ನೆಂಬ ಬೌದ್ಧ ಪ್ರಚಾರಕಾರನು ।
ಕೊಂಬು ಕಳಚಿದ ಗವಯನಾದನು ಸೆಣಸಿ ಮಧ್ವರಲಿ ॥ ೫೫ ॥

ರೇಗುಪ್ತಿ – ಏಕತಾಳ

ಪುಟ್ಟ ಯತಿಯ ವೇದಾಂತ ಪೀಠದಲಿ ।
ಪಟ್ಟಗಟ್ಟಿ ಆನಂದ ತೀರ್ಥರೆಂ ।
ದಿಟ್ಟು ಹೆಸರ ಮೇನೆಯಲಿ ಹೊತ್ತು ಸ ।
ದ್ಭಕ್ತ ವ್ರಾತವೆಲ್ಲ ॥
ಹತ್ತಿಳಿದು ಘಟ್ಟ ಪಟ್ಟಣಗಳತ್ತ ।
ತೀರ್ಥಗಳ ಸುತ್ತಿ ಸುಳಿಯುತ್ತ ॥
ಲತ್ತಿತ್ತಲಿದ್ದ ಮೌಢ್ಯಗಳ ಕಿತ್ತು ।
ದಿಟ್ಟತೆಯಲೆಲ್ಲ ಸುತ್ತುತ್ತ ॥ ॥ ೫೬ ॥

ಸಾವೇರಿ – ಝಂಪೆತಾಳ

ಗುರು ಮಧ್ವರೆಂದೆನಿಸಿ । ಪರಿಶುದ್ಧಿಯನು ಬಯಸಿ ।
ಶರಣರನು ಸಂತೈಸಿ । ಭರದಿ ಸಂಚರಿಸಿ ॥
ತೆರಳಿ ತೆಂಕಣದಲ್ಲಿ ಯಾತ್ರೆಗಳ ಪೂರೈಸಿ ।
ಮರಳಿ ಬಂದರು ಮತ್ತೆಯುಡುಪಿಯಾಶ್ರಯಿಸಿ ॥ ೫೭ ॥

ನವರೋಜು – ಏಕತಾಳ

ಗೀತೆಗೆ ಭಾಷ್ಯವ ಬರೆದು । ಅತಿ ।
ಯಾತುರದಲಿ ಗುರುಗಳ ನೆನೆದು ॥
ಪ್ರೀತಿಯೊಳದ ಗುರು ವ್ಯಾಸರಿಗೀಯುತ ।
ಸಾರ್ಥಕಗೊಳಿಪಾಕಾಂಕ್ಷೆಯೊಳಿರುತಿರೆ ॥ ॥ ೫೮ ॥

ಬದರಿಗೆ ನಾ ತೆರಳುವೆನು । ಶ್ರೀ ।
ಸದ್ಗುರುವರ ನಾ ಬೇಡುವೆನು ॥
ಸದಮಲ ಗಂಗಾಂಬಿಕೆಯಲಿ ಮೀಯುತ ।
ಸುಧವಳದ ಗಿರಿಗಳ ಸಂಚರಿಸುವೆ ನಾ ॥ ॥ ೫೯ ॥

ಸುರುಟಿ – ಏಕತಾಳ

ಭಾಗೀರಥಿಗಾಗಿ । ಎಳೆಯತಿ ।
ಪೋಗದಿರ್ ನಿನಗಾಗಿ ॥
ಬೇಗನೆ ಬಂದನು । ರಾಗದೊಳಿರುವಳು ।
ಹೋಗದಿರಿರು ನೀ । ನೀಗಳೆ ಎಂದರು ॥ ॥ ೬೦ ॥

ಭಾಮಿನಿ ಷಟ್ಪದಿ

ಮೂರು ದಿನದಲೆ ಗಂಗೆ ಜಿನುಗುತ ।
ತೋರಿ ಹರಿದಳು ಬಿಳಿಯ ಜಲದೊಳ ।
ಗೂರಜನ ಗುರುಮಧ್ವರೊಂದಿಗೆ ಮಿಂದುದಾ ದಿವಸ ॥
ಸಾರಲಂದಿದು ಮಧ್ವ ತೀರ್ಥವ ।
ದಾರು ಭಕ್ತಿಯ ಸ್ನಾನ ಗೈಯಲು ।
ಘೋರ ಪಾತಕ ರೋಗ ರುಜಿನಗಳೆಲ್ಲ ತೊಳೆಯುವುದು ॥ ೬೧ ॥

ಮಾಂಡ್ – ಏಕತಾಳ

ಕೆಲವು ದಿವಸದಲಿ ಗುರುತಿಸಿ ಗುರುವರ ।
ಕಳುಹಿಸಲೊಪ್ಪಿಗೆಯನು ನೀಡಿ ॥
ಕಲಿಕೆಯು ಬಲಗೊಳ್ಳಲು ದೇಶಾಟನ ।
ಫಲಿಸಲಿ ಎಂದಾಶೀರ್ವದಿಸಿ ॥ ॥ ೬೨ ॥

ಬಿಲಹರಿ – ಝಂಪೆ

ಆ ತುಷಾರದ ಗಿರಿಯ ಕಂದರದಿ ವಾಸಿಸುತ ।
ಶೀತಲದ ಗಂಗಾತಟಾಕದಲಿ ಧ್ಯಾನಿಸುತ ॥
ಮಾತುಗಳನಾಡದಲೆ ಗುರುವಿನಡಿ ಪೂಜಿಸುತ ।
ಲೀತೆರದಿ ನಲವತ್ತದೆಂಟು ದಿವಸ ॥ ॥ ೬೩ ॥

ತೋಡಿ – ರೂಪಕತಾಳ

ಬದರಿಯಲಿ ಬಾದರಾಯಣನಿಂದ ನೇಮವನು ।
ಮುದಿತ ಮಾನಸರಾಗಿ ಪಡೆದು ಬಂದು ॥

ಹತ್ತು ದಿಕ್ಕುಗಳಲ್ಲಿ ಖ್ಯಾತಿ ಪಸರಿಸುತಿರಲು ।
ತತ್ತ್ವವಾದದ ಮಹಿಮೆ ಜಗವರಿತುದು ॥ ॥ ೬೪ ॥

ಕೇದಾರಗೌಳ – ಝುಂಪೆತಾಳ

ಭಾಗವತ ಪಥವಿಡಿದು । ಸಾಗಿ ಮಧ್ವರು ನುಡಿದು ॥
ಯೋಗವದು ಭಗವಂತ ಸಾಂಗತ್ಯವೆನುತ ।
ಭೋಗಬಿಡು ತ್ಯಾಗತೊಡು । ಹೀಗೆ ನಂಬುಗೆಯನಿಡು ।
ನಾಗಶಯನನ ದಯೆಯು । ಬೇಗ ಲಭಿಸುವುದು ॥ ೬೫ ॥

ಮೋಹನ – ಅಷ್ಟತಾಳ

ಗುರುಗಳೆ ನಾವಿದನರಿಯೆವು । ನೀ ।
ವರುಹಿದ ಮಾರ್ಗದಿ ನಡೆವೆವು ॥
ಹರಿಯನು ಭಕುತಿಯಲರಿಯದಲರ್ಚಿಸೆ ।
ದೊರಕುವನೆ ತಾನೊಲಿದು ಶ್ರೀಪತಿ ।
ಕರುಣಿಸುವನೆ ಮತಿಗೆ ಸದ್ಗತಿ ॥ ॥ ೬೬ ॥

ಅಠಾಣ – ಝುಂಪೆತಾಳ

ಒಂದೆಡೆಗೆ ಭಗವಂತ । ನೊಂದೆಡೆಗೆ ಜಡವಿಶ್ವ ।
ಸಂದು ನಡುವೆಯಲಿರುವು । ದೊಂದು ಜೀವ ॥
ಕುಂದಿರದ ಭಾಗ್ಯವಿದೆ । ಗೊಂದಲದ ಬಾವಿಯಿದೆ ।
ಹೊಂದುವುದು ವಾಲಿದೆಡೆ । ಬಂದ ಜೀವ ॥ ॥ ೬೭ ॥

ಅರಿತು ಪಾಲಿನ ಕರ್ಮ ಮಾಡು ಬಂದುದನುಣ್ಣು ।
ಹರಿಯ ಚರಣಗಳರಿವು ತಪ್ಪದಂತೆ ॥
ಹರಿಯೆ ಪರದೈವತವು ಹರಿಯೆ ಗುರುವಾಸರೆಯು ।
ಹರಿಯೊಬ್ಬನೇ ಜಗದ ತಾಯಿ ತಂದೆ ॥ ॥ ೬೮ ॥

ಘಂಟಾರವ – ಅಷ್ಟತಾಳ

ರಜತಪೀಠ ಪುರದಿ ಮಠವ ।
ನಿಜದ ಮನದಿ ಗೈದು ಸತತ ।

ಸುಜನರಾಗಿಸುತ್ತ ಜನರ ।
ಬಿಜಯ ಗೈಯುತಿರ್ದರಾಗ ॥ ॥ ೬೯ ॥

ಮಾಂಡ್ – ಏಕತಾಳ

ಮಲಪೆಯ ಕಡಲಿನ ತಡಿಯೊಳಗೊಂದಿನ ।
ಮಳಲ ಹಾಸಿನಲಿ ಸಂಚರಿಸಿ ॥
ಬೆಳಗಿನ ಜಾವದ ಹೊಂಬೆಳಕಿನಲಿ ।
ಜಳಕಾಹ್ನಿಕಗಳ ಪೂರೈಸಿ ॥ ॥ ೭೦ ॥

ಕಡಲಲಿ ಮುಳುಗಿದ ನಾವೆಯು ಕಾಣಿಸಿ ।
ತಡಗಿದ ಗೋಪೀ ಚಂದನದಿ ॥
ಕಡೆಗೋಲನು ಪಿಡಿದಿಹ ಗೋಪಾಲಕ ।
ನೊಡಮೂಡಿದ ಮಧ್ವರ ಮನದಿ ॥ ॥ ೭೧ ॥

ಇದು ಸರಿಯೆಂದಾಲೋಚನೆ ಗೈಯುತ ।
ಮುದದಲಿ ನಾವೆಯನೆಬ್ಬಿಸುತ ॥
ಹುದುಗಿದ ದೇವಕಿ ಮೋಹನ ಮೂರ್ತಿಯ ।
ಮೊದಲದರೊಳಗವರಾರಿಸುತ ॥ ॥ ೭೨ ॥

ಸಡಗರದಲಿ ತಂದಾ ಚೆಲು ಮೂರ್ತಿಯ ।
ನುಡುಪಿಯಲೇ ತಾ ನೆಲೆಗೊಳಿಸಿ ॥
ಕಡು ಸಂತೋಷದೊಳನುಪಮಚರಿತನ ।
ನುಡಿದಾಡಿದರತಿ ಸಂಭ್ರಮಿಸಿ ॥ ॥ ೭೩ ॥

ಪುನ್ನಾಗತೋಡಿ – ಏಕತಾಳ

ಇವನೇ ನೋಡಿರಿ ನಂದಕಿಶೋರ ।
ಅವನಿಗೆ ಗುರುವೆಂದೆನಿಸುವ ಚೋರ ॥
ಭುವನೆಗೆ ಪತಿಯಿವ ದೇವಕಿಪುತ್ರ ।
ಶಿವಸಖ ದೊರಕಿದ ಮಂಗಳಗಾತ್ರ ॥ ॥ ೭೪ ॥

ಸಾವೇರಿ – ಝಂಪೆತಾಳ

ಉಡುಪತೀಶಿರ ಮಿತ್ರನಂ ತಂದು ಉಡುಪಿಯಲಿ ।
ಸಡಗರದಿ ದೊರೆಯಾಗಿ ನಿಲುವಂತೆ ನೇಮದಲಿ ॥

ಪೊಡವಿ ಪಾವನವಾಗುವಂತಹಾಶಯದಲ್ಲಿ ।
ಬಿಡದೆ ಪೂಜಿಸುತಿರ್ದರಾಗ ದಿನದಿನದಿ ॥ ॥ ೭೫ ॥

ಹದಿನಾಲ್ಕು ತರ ಪೂಜೆ ದಿನದಿನವು ನಡೆದಿರಲಿ ।
ಬದಿಯ ದೀಪವಿದೆಂದು ನಂದದಿರಲಿ ॥
ಉದರಯಜ್ಞಕ್ಕನ್ನ ಸಂತರ್ಪಣೆಗಳಿರಲಿ ।
ಕಿದುವಿದಕ್ಷಯಪಾತ್ರೆ ಸಟ್ಟುಗಗಳೊದಗಿ ॥ ॥ ೭೬ ॥

ದೇವಕಿಗೆ ದ್ವಾರಕೆಯಲಿರುವಾಗ ಹರಿ ಬಾಲ್ಯ ।
ತಾ ವೀಕ್ಷಿಸಿಲ್ಲೆಂಬ ಕೊರತೆ ಕಾಣಿಸಿತು ॥
ದೇವ ಶ್ರೀಕೃಷ್ಣನಿದನರಿತು ಲೀಲೆಗಳಿಂದ ।
ತಾಯ ಮನರಂಜಿಸಿದ ಶಿಶುತನದೊಳನಿತು ॥ ॥ ೭೭ ॥

ಇದನು ಕಂಡಳು ದೇವಿ ರುಕ್ಮಿಣಿಯು ಮೋಹದಲಿ ।
ಚದುರ ಮತ್ತೊಮ್ಮೆ ತೋರೆಂದು ಬೇಡಿದಳು ॥
ಮುದದಿ ಹರಿ ನಸುನಗುತ ವಿಶ್ವಕರ್ಮನ ಕರೆದು ।
ತಡವಿರದೆ ನಿರ್ಮಿಸಲು ಕರಿಶಿಲೆಯ ಕೊರೆದು ॥ ೭೮ ॥

ಇಷ್ಟಪೂಜೆಯ ಪಡೆದ ಈ ವಿಮಲ ವಿಗ್ರಹವ ।
ಕೃಷ್ಣ ವಿರಮಿಸಿದಾಗ ಪಾರ್ಥ ಕೊಂಡೊಯ್ದು ॥
ಉತ್ತಮದ ರುಗ್ಮಿಣೀವನದಲ್ಲಿ ಇರಿಸಿದ್ದ ।
ಮತ್ತೆ ಚಂದನ ಗಡ್ಡೆಯೊಳಗೆ ಸೇರಿತ್ತು ॥ ॥ ೭೯ ॥

ಕೊರತೆಗಳು ಬರದಂತೆ ಕಾವನವ ಶ್ರೀಕೃಷ್ಣ ।
ನಿರತರಾಗಿರಿ ನಿತ್ಯ ಸೇವೆಗೆನುತ ॥
ಕರೆಯುತ್ತ ಶಿಷ್ಯತ್ವ ಸ್ವೀಕರಿಸಿದವರೆಂಟು ।
ವರಯತಿಗಳಿಗೆ ಹೇಳಿ ವಿಧಿಯ ಮಾತ ॥ ॥ ೮೦ ॥

ಮಾಂಡ್ – ಏಕತಾಳ

ಚಾತುರ್ಮಾಸ್ಯಕೆ ಮಧ್ವಾಚಾರ್ಯರು । ಕಣ್ವ ।
ತೀರ್ಥದಲಿ ಕುಳಿತೊಮ್ಮೆ ॥
ನೀತಿಯಲೀ ನೀವ್ ದ್ವಂದ್ವಪದ್ಧತಿಯ ।
ರೀತಿಯ ಪಾಲಿಸಿರಿನ್ನೊಮ್ಮೆ ॥ ॥ ೮೧ ॥

ಭಾಮಿನಿ ಷಟ್ಪದಿ

ಎಂದು ಸೂಚಿಸಿ ಕೆಲವು ಶಿಷ್ಯರ ।
ನಂದು ನೇಮಿಸಿ ಹರಿಯ ಪೂಜೆಯ ।
ದೆಂದು ನಿಲ್ಲದೆ ನಡೆವ ತೆರದಲಿ ನಿಯಮ ಬೋಧಿಸುತ ॥
ಮುಂದೆ ನಾವೈದುವೆವು ಹಿಮಗಿರಿ ।
ಗೆಂದೊಡಮಿತೋತ್ಸಹದ ಪರಿಮಿತ ।
ವೃಂದದಲಿ ಗುರು ಮಧ್ವರಾಯ ಸವಾರಿ ಬದರಿಯೆಡೆ ॥ ೮೨ ॥

ಸಾವೇರಿ – ಝಂಪೆತಾಳ

ಹೋಗುತಿರೆ ವರಯತಿಯ ಕಂಡವರು ಮಣಿಯುವರು ।
ಬಾಗಿ ಫಲಪುಷ್ಪಗಳ ಕಾಣಿಕೆಯನಿತ್ತು ।
ಸಾಗುವೆಡೆ ವರ್ತಮಾನವ ಕೇಳಿ ಬರುವವರು ।
ನೀಗಲ್ಯೆ ಭವಭಯದ ನಿತ್ಯದಾಪತ್ತು ॥ ॥ ೮೩ ॥

ವರನದಿಯು ಗೋದಾವರೀ ತಟದೊಳಿರುತಿರ್ದ ।
ಪರಿಸರದಿ ಹೆಸರಾದ ವಾಕ್ಯಪ್ರವೀಣ ।
ವರ ಶಾಸ್ತ್ರಿಗಳು ಶೋಭನರರಧಿಕ ಕೀರ್ತಿಯಲಿ ।
ಮೆರೆಯುತಿರ್ದರು ನಾಡಿನತ್ಯಂತ ಜಾಣ ॥ ॥ ೮೪ ॥

ಕೇದಾರಗೌಳ – ಝಂಪೆತಾಳ

ಸಾಟಿಯಿರದಿಹ ವಾದ । ಕೂಟಗಳ ಗೆದ್ದಿರುವೆ ॥
ಮಾಟಗಾರರ ಮಾತಿ । ನೀಟಿಯಲಿ ತಿವಿದಿರುವೆ ॥
ಭೇಟಿಯಾಗೀ ಯತಿಯ । ದಾಟಿಯರಿಯುವೆ ಮಾತಿ ।
ನಾಟದೊಳಗೆನುತ ಬರಲು ॥ ॥ ೮೫ ॥

ಗುರುವರ್ಯ ದಶಪ್ರಮತಿ । ಚರಣ ದರ್ಶನದಿಂದ ॥
ಗುರುತರದ ವಚನಸಿರಿ । ಪರವಶತೆಯೊಲವಿಂದ ॥
ಹರಿದಹಂಕಾರಗಳು । ದುರಿತ ತಾಪಗಳುದುರಿ ।
ನಿರತ ಸೇವಕನಾದನು ॥ ॥ ೮೬ ॥

ತೋಡಿ – ಝಂಪೆತಾಳ

ಕೇಳಿ ವಿಸ್ಮಿತರಾದ ದೇಶ ದೇಶದ ಜನರಿ ।
ಗೊಳ್ಳಿತನು ಬೋಧಿಸುತ ಸಂಚರಿಸುತಿರುವಾಗ ।
ದಿಲ್ಲಿಯಾಳುತಲಿರ್ಪನಾ ಜಲಾಲುದ್ದೀನ ।
ಖಿಲ್ಜಿಯಾಣತಿಯಂತೆ ಸುರನದಿಯು ಗಡಿಯು ॥ ೮೭ ॥

ತೋಡಿ – ಅಷ್ಟತಾಳ

ಆಚೆಗೆ ದಾಟುವುದೊಲ್ಲರು । ಬರಿ ।
ನೀಚರು ತುಂಬಿಹರೆಲ್ಲರು ॥
ಗೋಚರಿಸದು ಪಥವವಸರದಲಿ ಸುವಿ ।
ವೇಚನೆಯಿಲ್ಲದೆ ನಡೆದರದನುಚಿತ ॥ ॥ ೮೮ ॥

ಗಂಗೆಯ ದಾಟಿದರನ್ಯರು । ಬಡಿ ।
ದಂಗಾಂಗಗಳನೆಲ್ಲ ಕಡಿವರು ॥
ಸಂಗರ ವೀರರೆ ಕೈಚೆಲ್ಲಿ ಕುಳಿತಿರೆ ।
ಹಂಗೇತಕೆಮಗೆಂದು ಹಲವರು ನುಡಿಯೆ ॥ ೮೯ ॥

ಕಾಂಬೋಧಿ – ಝಂಪೆತಾಳ

ಭಯ ಬೇಡ ಜಗದೊಳಗೆ । ಭಯನಾಶನನ ಬಿಡದೆ ॥
ದಯೆಯ ಸಂಪಾದಿಸುವ । ಜಯ ದೊರೆವ ಘಳಿಗೆ ॥
ಭಯ ಮೀರಿದವರೊಳಗೆ । ಮಯವಾಗುತೊಳಹೊರಗೆ ॥
ಲಯವಾಗಿಸುತ ಭಯವ । ನಯದಿ ಹರಿಯೊದಗೆ ॥ ೯೦ ॥

ಮಾರವಿ – ಏಕತಾಳ

ತಡೆವವರಾರೆಮ್ಮನು ನೋಡುವೆವೆಂ ।
ದಡಿ ಮುಂದಿಡುತಿರೆ ಯವನರ ಭಟರುಗಳ್ ।
ಘುಡುಘುಡಿಸುತ ಕೂರಂಬುಗಳೆಸೆಯಲು ।
ನಡೆದರು ನೀರೊಳು ಧರೆ ಬೆದರಿದುದೈ ॥ ॥ ೯೧ ॥

ಈಚೆಯ ತಡಿಗೈದಿರೆ ಯತಿ ಮಧ್ವರ ।
ನಾಚೀಚೆಯಲಾವರಿಸಿ ಭಟಾವಳಿ ॥
ತೋಚಿದ ತೆರದಲಿ ಮಾತಾಡುತ ಮರೆ ।
ಮಾಚುತ ತಂದವರರಮನೆಯೆಡೆಗೆ ॥ ॥ ೯೨ ॥

ಭೈರವಿ – ಝಂಪೆತಾಳ

ದಿಲ್ಲಿಯಾಳುತಲಿರ್ದನಾ ಜಲಾಲುದ್ದೀನ ।
ಖಿಲ್ಜಿಯೆಂದೆಂಬ ದೊರೆಯಮಿತವಿಕ್ರಮಿಯು ॥
ಖುಲ್ಲರೊಡಗೂಡಿ ವೈದಿಕಧರ್ಮ ವಿರೋಧಿ ।
ಯಲ್ಲಾಹನೇ ದೇವನೆನುತಿರ್ದ ಮದದಿ ॥ ॥ ೯೩ ॥

ಭರತ ಖಂಡವನೆಲ್ಲವಲ್ಲಮಯವಾಗಿಸುವೆ ।
ನರಸುಗಳ ಸೆರೆವಿಡಿದು ಮತವಿಭಾಡಿಸುವೆ ॥
ದೊರೆತನವನೊಶಮಾಡಿಕೊಂಡೆಲ್ಲರನು ಕೂಡಿ ।
ಮೆರೆಸುವೆನಿದಿಸ್ಲಾಮನೆಸಗುವೆನು ಮೋಡಿ ॥ ॥ ೯೪ ॥

ಒಂದು ಕೈಲಿ ಕುರಾನು ಮತ್ತೊಂದರಲಿ ಖಡುಗ ।
ವಿಂದದರೊಳಾಯ್ಕೆಯಿದೆ ಭಾರತೀಯರಿಗೆ ॥
ಮುಂದೆ ಸುಂದರವಾದ ಬದುಕ ಬಯಸುವರೆಲ್ಲ ।
ಬಂದೆನಗೆ ಶರಣಾಗಿ ಚೆಂದದೊಳಗೆ ॥ ॥ ೯೫ ॥

ಆ ಸಮಯದಲಿ ಚಾರರೋಡೋಡಿ ಬಂದೆರಗು ।
ತಾ ಸಭಾಲಯದಲ್ಲಿ ಬಿಸುಸುಯ್ದರು ॥
ಲೇಸುಗೈದೆವು ಕಪಟಿ ತಾಪಸಿಯ ಸೆರೆವಿಡಿದೆ ।
ವೀಸು ದಿನದಲಿ ಕಾಣದಿರುವಂತಿದೆ ॥ ॥ ೯೬ ॥

ಬಿಲಹರಿ – ಅಷ್ಟತಾಳ

ಇವನಾವನೋ ಮೋಸಗಾರ । ನಿಮ್ಮ ।
ವಿವರವರಿಯಲು ಬಂದ ಭಲೆ ಬೇಹುಗಾರ ॥
ಜವದಿ ಗಂಗೆಯ ನಡೆದು ದಾಟಿರುವಂತವ ।
ನಿವನ ಕೌಶಲ ಬಲು ಕೌತುಕ ಜೀಯ ॥ ॥ ೯೭ ॥

ತೋಡಿ – ಮಟ್ಟೆತಾಳ

ಯಾರು ನೀನು ಪೇಳು ಮೊದಲ ।
ದಾರು ಕಳುಹಿದವರೆಂಬುದನು ।
ತೋರಬೇಡ ಕಪಟವನ್ನು । ಕ್ರೂರನಾಹೆನು ॥ ೯೮ ॥

ತೋಡಿ – ರೂಪಕತಾಳ

ಕೇಳು ದೊರೆಯೆ ನಾನಿದೆನಲಿಕೆ । ಮನ ನಾಚುತಿಹುದು ।
ಪೇಳದಿರಲು ನಿನ್ನ ಗದರಿಕೆ ॥ ಲೀಲೆಯಾಗಿ ಜಗದೊಳೆಲ್ಲ ।
ಜಾಲವೆಸಗಿದವನದೆಲ್ಲ । ಪೇಳಲವನೆ ಲೋಕಜನಕನು ।
ಭಯಭಕ್ತಿಯಿಂದ । ಬಾಳಬೇಕು ಸೋದರತೆಯೊಳು ॥ ೯೯ ॥

ಕರೆವರೆಮ್ಮ ಮಧ್ವರೆನುತಲಿ । ನಮ್ಮೊಡನೆ ಬರುವ ।
ಹರಿಯ ಶರಣರೆಲ್ಲ ನೇಮದಿ ॥ ತೆರಳುತಿಹೆವು ಬದರಿಯೆಡೆಗೆ ।
ಸುರನದಿಯನು ದಾಟುವುದಕೆ । ಹೊರತು ದಾರಿಯಿಲ್ಲದಿಹುದಕೆ ।
ಕೇಳುವೆವು ನಿನಗೆ । ಮರೆಯಮಾಡದೆಲ್ಲವರುಹೆಲೆ ॥ ೧೦೦ ॥

ಭೈರವಿ – ಝಂಪೆತಾಳ

ಬದರಿಗೆ ತೆರಳುವುದೇಕೆ ।
ನಮ್ಮೊಡನಿರಿ । ಬೆದರಿಕೆ ನೂಕೆ ॥
ಬದುಕಲು ಸಂತೋಷದಿ ನಾ ಬಿಡುವೆನು ।
ಮುದದೊಳಗಲ್ಲಾಹಗೆ ಜಯವೆಂದರೆ ॥ ॥ ೧೦೧ ॥

ದಯೆಯಿದೆಯಲ್ಲನಿಗೆರಗೆ ।
ಭಯವಿರದಲೆ ಸಂರಕ್ಷಣೆಗೆ ॥
ಜಯವೆಂದೀ ಪಥವನುಸರಿಸಿದರನು ।
ನಯದಲಿ ಕಾಪಾಡುವೆ ತಾನೆಂದನು ॥ ॥ ೧೦೨ ॥

ಅನುಸರಿಸದಿರಲು ಬಿಡೆನು । ತಲೆ ।
ಯನು ಖಡುಗದಿ ಸವರುವೆನು ॥
ತನುವುಳಿಸಲು ಶರಣಾಗತರಾಗುವು ।
ದೆನುತವ ಕೋಪದೊಳಾಣತಿ ಮಾಡೆ ॥ ॥ ೧೦೩ ॥

ಮೋಹನ – ಝಂಪೆತಾಳ

ನೀ ನಂಬುವಲ್ಲನವನೆನಗೆ ನಾರಾಯಣನ ।
ದೇನೆಂದರೂ ಬಲ್ಲ ಭಗವಂತನವನು ॥
ನೀನು ತಾನೆಂಬರೆಲ್ಲರಿಗವನೆ ಕಾರಣನು ।
ದೋಣಿಯಿರದಲೆ ನದಿಯ ದಾಟಿಸಿದನವನು ॥ ೧೦೪ ॥

ಒಬ್ಬನೇ ಭಗವಂತ ನಾಮ ಹಲವಾರಾಗು ।
ತೊಬ್ಬಬ್ಬರಿಗೆ ದೇವನೊಬ್ಬೊಬ್ಬನಾಗಿ ॥
ಹಬ್ಬಿ ಕಾಣುವುದಬ್ಬವೆನುತುಬ್ಬಿ ನಮಿಸದಲೆ ।
ಕೊಬ್ಬಿ ದುರ್ಮಾರ್ಗದಲಿ ನಡೆಯಬಹುದೇ ॥ ೧೦೫ ॥

ಕೊಲುವನಾರ್ಕಾವನಾರೆಂಬುದವನಿಚ್ಛೆಯಲಿ ।
ಸಲುವುದಲ್ಲದೆ ನೀನದೆಷ್ಟೆಂದು ಕೊಲುವೆ ॥
ಬಲವೆಂಬುದವನ ದಯೆ । ಯುಳಿದಲ್ಲಿಯುಳಿವುದಲೆ ।
ತಲೆತೆಗೆವ ಕಾಯಕದಲೇನು ಗಳಿಕೆ ॥ ॥ ೧೦೬ ॥

ಮಾಂಡ್ – ಏಕತಾಳ

ಈ ಮಾತಿಗೆ ಭಯವಾಯಿತು ಖಳಪತಿ ।
ಗೀ ಮೋಡಿಯ ನಡೆಗೆ ॥
ಸಾಮಾನ್ಯನೆ ತನಗಿದಿರೀಪರಿಯ ವಿ ।
ರಾಮಿಸಿದವರುಂಟೇ ॥ ॥ ೧೦೭ ॥

ಮೋಹನ – ಅಷ್ಟತಾಳ

ಶರಣಾದೆ ಗುರು ಮಧ್ವರಾಯ । ನಿಮ್ಮ ।
ಪರಿವಾರವಿರಲೆಮ್ಮ ಸನಿಹ ॥
ಕೊರತೆಗಳೊದಗದ ತೆರದೊಳಗುಪಚಾರ ।
ವಿರಚಿಸಿ ದೈನ್ಯದೊಳಾ ದೊರೆ ಬೇಡಿದ ॥ ೧೦೮ ॥

ಕೊಡುವೆ ನಾ ದೊಡ್ಡ ಜಹಗೀರ । ಮಾಡಿ ।
ಕೊಡಿಸುವೆ ಮಠಮಂದಿರಗಳ ॥
ನುಡಿದ ಮಾತಿಗೆ ತಪ್ಪಲಾರೆನು ದಯಮಾಡಿ ।
ಡುತೆಲ್ಲ ಪೋಗಬೇಡೆನುತವ ನುಡಿದ ॥ ॥ ೧೦೯ ॥

ಒಲ್ಲೆವು ನಿನ್ನ ವೈಭವವ । ನಮ ।
ಗಿಲ್ಲವು ಸೌಭಾಗ್ಯ ಸುಖದ ಹಂಬಲವ ॥
ದೆಲ್ಲವದಾಗಿರುವಂಥ । ನಮ್ಮ ।
ಫುಲ್ಲಲೋಚನನಪ್ಪ ಸೌಭಾಗ್ಯವಂತ ॥ ॥ ೧೧೦ ॥

ವಾರ್ಧಿಕ ಷಟ್ಪದಿ

ತೋರುವುದು ಬದರಿಯೆಡೆಗಿರುವ ದಾರಿಯನೆಮಗೆ ।
ಸಾರುವೆವು ತಡವಿಲ್ಲದಂತಲ್ಲಿಗವಸರದೆ ।
ಶೂರ ನಿನ್ನಾಂತರ್ಯದಲ್ಲಿರಲಿ ಶಾಂತಿ ದಯೆಯೆಂ-
ದೆನುತ ಪೊಡಮಟ್ಟರು ॥
ದೂರ ದಾರಿಯು ಸಾಗುತಿರುವಾಗ ಹಿಮಗಿರಿಯ ।
ಚಾರು ವಿಭ್ರಮ ಕಂಡು ಬೆರಗಾಗಿ ನಸುನಗುತ ।
ಲಾ ರಮೇಶನು ಬೊಮ್ಮ ಗಿರಿಜೇಶರಕ್ಕರೆಯ ನೆಲದ ಸಿರಿ
ಮಿಗಿಲೆಂದರು ॥ ॥ ೧೧೧ ॥

ಪುನ್ನಾಗತೋಡಿ – ಏಕತಾಳ

ಬಲು ದುರ್ಗಮ ಗೊಂಡಾರಣ್ಯದೊಳು ।
ಬಳಿವಿಡಿದಿಹ ಶಿಷ್ಯರ ಗಡಣದೊಳು ॥
ತೊಳಲಾಡುವ ಸಂಕಷ್ಟದ ದಾರಿಯ ।
ಹೊಳೆಗಳ ದಾಟುತಲಿರುತಿರಲು ॥ ॥ ೧೧೨ ॥

ದಾರಿಯ ಚೋರರು ಗಮನಿಸಿ ಬರುತಿಹ ।
ಹಾರುವರನು ದೋಚುವುದೆಂದು ॥
ದೂರದಲೇ ಹವಣಿಕೆಯಲಿ ಖಳಪರಿ ।
ವಾರವಿಹುದ ಮಧ್ವರು ಕಂಡು ॥ ॥ ೧೧೩ ॥

ಬಿಲಹರಿ – ಅಷ್ಟತಾಳ

ಎಲ್ಲರು ಕೇಳಿರಿ ಸುಮ್ಮನೆ । ನಮ ।
ಗಿಲ್ಲವು ತಮ್ಮನೆ ನಿಮ್ಮನೆ ॥
ಕಳ್ಳರ ಕಂಡೆದೆ ಜುಮ್ಮೆನ್ನದೆ ನೀವ್ ।
ಕುಳ್ಳಿರಿ ಸುಮ್ಮನೆ ಬಿಮ್ಮನೆ ॥
ಕಲ್ಲುಗಳಂತಿರಲೊಮ್ಮೆನೆ । ಮ ।
ತ್ತಿಲ್ಲದಲಳಿಸುವೆ ಹಮ್ಮನೆ ॥ ॥ ೧೧೪ ॥

ಮಧ್ಯಮಾವತಿ – ತ್ರಿವುಡೆತಾಳ

ಬಂದು ನೋಡಿದರೆಲ್ಲ ಕಲ್ಗಳೊ ।
ಳೊಂದನಲ್ಲಾಡಿಸಲಿಕಾಗದಿ ।

ದೆಂದು ನಡುಗುತ ಕಾಡ ಭೂತವ ।
ನಂದು ನುತಿಸಿದರು ॥ ॥ ೧೧೫ ॥

ದುಡುಕು ತೋಡಿ

ನಮ್ಮ ಕ್ಷಮಿಸು ಭೂತರಾಯ । ನಿಂಗೆ ।
ದಮ್ಮಯ್ಯವೆನುತೇವೋ ಜೀಯ ॥
ಸ್ವಾಮಿ ಕಲ್ಲಪ್ಪನೆಂಬುವೆವು । ನಿಮ ।
ಗೆಮ್ಮ ಕಾಣಿಕೆಯೊಪ್ಪಿಸುವೆವು ॥ ॥ ೧೧೬ ॥

ಎಂದವರೆಲ್ಲರು ಬೇಡಿ । ಮತ್ತೆ ।
ಹಿಂದೆ ಪೋದರು ಭಯಗೂಡಿ ॥
ಮುಂದೆ ಗುರುಗಳ್ಪೋಗಲಾಗಿ । ಜೊತೆಗೆ ।
ಬಂದರೆಲ್ಲರು ಧೈರ್ಯವಾಗಿ ॥ ॥ ೧೧೭ ॥

ಅಠಾಣ – ಝುಂಪೆತಾಳ

ಈ ತೆರದೊಳೊಮ್ಮೆ ಸಂಕಷ್ಟವನು ಪರಿಹರಿಸಿ ।
ಖ್ಯಾತ ಮುನಿ ಮುಂದಕ್ಕೈತರುವಾಗ ಮತ್ತೊಮ್ಮೆ ॥
ಘಾತುಕರ ತಂಡವೊಂದಿದಿರಾಗಿ ಘರ್ಜಿಸಲು ।
ಭೀತಿಯೆಲ್ಲರ ಕಾಡಲು ॥ ॥ ೧೧೮ ॥

ಮಾರವಿ – ಏಕತಾಳ

ಹೋಯ್ ಹೋಯ್ ನಿಲ್ಲಿರಿ ಪೋಗುವುದೆಲ್ಲಿಗೆ ।
ಬಾಯ್ ಬಿಡದಿರೆ ಬಡಿವೆವು ನಿಮಗೆ ॥
ಏಯ್ ಕೇಳಿಸಿತೇನ್ ಧನಕನಕಗಳನು ।
ನೀವ್ ಕೊಡದಿರೆ ಕೊಡಲಿಯ ಬಡಿಗೆ ॥ ॥ ೧೧೯ ॥

ಈಗಲೆ ಕೊಡಲಿಯ ತೆಗೆದೆಸೆಯುವೆ ನಾ ।
ಬೇಗನೆ ಸಲ್ಲಿಸಿರೆಲ್ಲವನು ॥
ನೀಗದೆ ಜೀವವನುಳಿಸುವೆ ದಯದೊಳ ।
ಗೀಗಲೆ ಕೊಡಿ ಸಂಪದಗಳನು ॥ ॥ ೧೨೦ ॥

ಕೊಡಿಕೊಡಿ ನಿಮ್ಮಯ ಸಂಪದವೆನ್ನುತ ।
ಬಿಡದೆರಗಿದ ಕಟುಕರನೆದುರಿಸಲೆಂ ॥

ದೊಡನಿಹ ಪರಿವಾರವ ತಾವೀಕ್ಷಿಸಿ ।
ಕೊಡಲಿಗೆ ಪರಿಹಾರವನಾಲೋಚಿಸಿ ॥ ॥ ೧೨೧ ॥

ಮಧ್ಯಮಾವತಿ – ಕೋರೆತಾಳ

ಕರೆಯುತಾಗುಪೇಂದ್ರ ತೀರ್ಥನೋಡಿಕೊಳ್ಳಿದನ್ನೆನುತ್ತ ।
ಹರಿಯ ಧ್ಯಾನದಲ್ಲಿ ಗುರುವು ಮಗ್ನನಾಗಲು ॥
ಜರಿದು ಗಟ್ಟಿಯಾಗಿ ಚೋರರೆದುರು ಕೆರಳಿ ನಿಂತುಕೊಂಡು ।
ಕರದಿ ಪರಶು ಧರಿಸಿ ದುರುಳರನ್ನು ಸವರಲು ॥ ೧೨೨ ॥

ಕೊಡಲಿಯ ಹಿಡಿದಾ ದಡಿಗರ ಮಣಿಸುತ ।
ಬಡಿದರು ತಮ್ಮಯ ಗುರುಬಲದಿ ॥
ಅಡಗಿತು ಚೋರ ಪರಾಕ್ರಮ ವಿಕೃತಿ ।
ನಡುಗಿತು ಭುವನಂಗಳು ಕ್ಷಣದಿ ॥ ॥ ೧೨೩ ॥

ಸಾವೇರಿ – ಝಂಪೆತಾಳ

ಮುಂದೆ ಹಿಮಗಿರಿಯಲ್ಲಿ ಕಳೆದು ಮಾಸಾದಿಗಳ ।
ಕಂದರದಿ ಗುರು ವ್ಯಾಸರಿಂದ ನಿರ್ದೇಶನವ ॥
ನಂದು ಪಡೆಯುತ ಮತ್ತೆ ತೀರ್ಥಾಟನೆಯ ನಡೆಸಿ ।
ನೊಂದವರನುಪಚರಿಸಿ ಬಂಧನವ ಬಿಡಿಸಿ ॥ ॥ ೧೨೪ ॥

ಬರುತ ಕಾಶಿಯಲಿರುವನಮರೇಂದ್ರ ಪುರಿಯೆಂಬ ।
ವರ ವಿಶಾರದನನ್ನು ವಾದದಲಿ ಸೋಲಿಸುತ ॥
ಮೆರೆಸುತ್ತ ತತ್ತ್ವವಾದವನೆಲ್ಲ ದೆಸೆಗಳಿಗೆ ।
ಭರದಿ ಶಿಷ್ಯರ ಜೊತೆಗೆ ಕುರುಕ್ಷೇತ್ರದೆಡೆಗೆ ॥ ॥ ೧೨೫ ॥

ಇಲ್ಲಿ ತೋಡಿರಿ ನೆಲವನೆನುತೆಲ್ಲ ಜನರಿಂದ ।
ಲಲ್ಲಿ ತೆಗೆಯಿಸಿ ಭಾರಿ ಗದೆಯೊಂದು ಸ್ಥಳದಿಂದ ॥
ಮೆಲ್ಲನಿರಿಸುತ ಮತ್ತೆ ಮಣ್ಣಿನೊಳ ಸೇರಿಸುತ ।
ಬಲ್ಲೆನಾ ದಿನವೆಂದು ಸೊಲ್ಲ ವಿವರಿಸುತ ॥ ॥ ೧೨೬ ॥

ದಕ್ಷಿಣದ ಗೋವೆಯಲಿ ಸಂಚರಿಸಿ ಪಶುಪೆಯೊಳು ।
ಲಕ್ಷಣದ ಸಂಗೀತ ಮೋಡಿಯೊಳಗೆಲ್ಲರಾ ॥

ಕರ್ಷಿಸುವ ತೆರ ತತ್ತ್ವವಾದವನು ಬೋಧಿಸುತ ।
ರಕ್ಷಿಸಿದರುನ್ನತದ ವೈದಿಕತೆ ತಿರುಳ ॥ ॥ ೧೨೭ ॥

ಕೊರಡು ಕೊನರಿಸಿ ಮತ್ತೆ ಕಗ್ಗಲ್ಲ ಬಂಡೆಯನು ।
ಕರದೊಳಗೆ ತೆಗೆದಿರಿಸಿ ಬೆರಗು ತೋರಿಹರು ॥
ಶರಣಾಗಿ ಬಂದ ನರಹರಿ ಯತಿಯ ಬಾರೆನುತ ।
ಬೆರೆಸಿ ಸಂಗೀತ ಕಲೆಯೊಡನೆ ಭಾಗವತ ॥ ॥ ೧೨೮ ॥

ದೇಶೀಯ ಜನಮನಕೆ ಹರಿಯರಿವು ದೊರೆಯಲ್ಕೆ ।
ಲೇಸಾದ ಗಾನ ಕುಣಿತಾದಿಗಳ ಮೇಳೈಕೆ ॥
ಯಕ್ಷಗಾನವ ರಚಿಸು ಹತ್ತಾವತಾರಗಳ ।
ಶಿಕ್ಷಣವನದರಿಂದ ಪಡೆದುಕೊಳಲಿ ॥ ॥ ೧೨೯ ॥

ಮಾಂಡ್ – ರೂಪಕತಾಳ

ಈ ದಶಾವತಾರ ಕಥೆಗಳೆಲ್ಲ ವೇಷವಾಗಿ ಗಾನ ।
ವೇದ್ಯವಾಗಿ ಮೂಡಿ ಬರಲು ಚೆಂದವಾಯಿತು ॥
ಬೋಧೆಯೊಂದು ಜನರ ಮನಕೆ ರಂಜಿಸುತ್ತ ಹೊಳಹಿನಲ್ಲಿ ।
ಭೇದವಿರದಲರಿವ ಕೊಡುವ ತಾಣವಾಯಿತು ॥ ॥ ೧೩೦ ॥

ಸೌರಾಷ್ಟ್ರ – ತ್ರಿವುಡೆತಾಳ

ತುಳುವರಿಗೆ ದೊರೆಯಾಗಿ ಬಲು ನಳ ।
ನಳಿಪ ಕಾಸರಗೋಡಿನೋಲಗ ।
ಚೆಲುವ ಜಯಸಿಂಹಾಖ್ಯ ನಡೆಸಿರೆ । ಗೆಲುವಿನಿಂದ ॥ ॥ ೧೩೧ ॥

ಧರೆಯೊಳಗೆ ಮೆರೆದಿಹುದು ಸತ್ಕತೆ ।
ವರ ಮುನಿಪ ಶ್ರೀಮಧ್ವರೆಂಬರ ।
ಚರಿತವೆಲ್ಲೆಡೆ ಕೇಳಿ ಬರುತಿಹುದು । ದರಿತೆವಿಂದು ॥ ॥ ೧೩೨ ॥

ಗುರುವಿನಾಸರೆ ಬೇಡಿ ಮಣಿಯುತ ।
ಚರಣಪೂಜೆಯ ಸಲಿಸಿ ನಯದಲಿ ।
ಕರೆವ ನಾಡಿಗೆ ಭಿಕ್ಷಸೇವೆಯ । ವಿರಚಿಸಲ್ಕೆ ॥ ॥ ೧೩೩ ॥

ಎಂದು ತಾನತಿ ಭಕ್ತಿಭಾವದೊ ।
ಳಂದು ಹೊರಡಲು ಚರಣ ಕಾಣಿಕೆ ।
ಗೆಂದು ಬಂಡಿಯಲೇರಿಸುತ ಬಲು । ಚೆಂದದೊಳಗೆ ॥ ೧೩೪ ॥

ಮಾಂಡ್ – ಏಕತಾಳ

ಕಾಸರಗೋಡಿನ ಪದ್ಮತೀರ್ಥನೆಂ ।
ಬಾಸೆಯ ಯತಿಗಿದು ಸಂಕಟವೆನಿಸಲು ॥
ಬೇಸರದಲಿ ತನ್ನವರಲಿ ಪೇಳುತ ।
ಲೇಸರಸಲು ಕುಹಕದಿ ಸತತ ॥ ॥ ೧೩೫ ॥

ಮೋಹನ – ಅಷ್ಟತಾಳ

ಎಂತ ಮಾಡುವುದು ನಾವು । ಚಿಂತೆಯೆಂಬುದು ಬಿಡದು ।
ತಂತ್ರ ಮಂತ್ರಗಳೆಲ್ಲ । ವುಂತೆಯಾಗಿಹುದು ॥
ಇಂತು ನಮ್ಮನು ಕೆಣಕಿ । ಪಂಥಂಗಳಲಿ ಮಣಿಸಿ ।
ನಂತರದಿ ತಾನು ಸ್ವ । ತಂತ್ರನಾಗಿಹನಲ್ಲ ॥ ॥ ೧೩೬ ॥

ನಮ್ಮ ಸಂಪ್ರದಾಯವ ಹಾಳು ಮಾಡಿ । ಮತ್ತೆ ।
ಸುಮ್ಮನೆ ಭಜನೆ ಸ್ತೋತ್ರಗಳನ್ನು ಹಾಡಿ ॥
ದಮ್ಮಿನ ಮಾತುಗಳಾಡಿ । ಬಲು ।
ಹಮ್ಮಿಲಿ ಮೆರೆಯುತಲಿರುವುದ ನೋಡಿ ॥ ॥ ೧೩೭ ॥

ಮುರಿಯುವೆನವನ ದಂಡಗಳ । ಸೊಕ್ಕು ।
ಕರಗಿಸಿ ಕಲಿಸುವೆ ಧರ್ಮ ಕರ್ಮಗಳ ॥
ಕರೆದು ಕೊಡಿಂಜಾಡಿ ಸೋದರರಿಂದಲೆ ।
ಪರಮ ಪರಾಕ್ರಮ ತೋರಿಸಿ ಬಿಡುವೆ ॥ ॥ ೧೩೮ ॥

ಸಾಂಗತ್ಯ – ರೂಪಕತಾಳ

ಕೊಲುವೆ ಮಧ್ವರನೆನುತ ಖೂಳರಿಬ್ಬರ ಕರೆದು ।
ಕಳವಿನಲಿ ಕಳವಳದಿ ಪೇಳಿ ।
ನಿಲದೆ ತೆರಳಿರಿ ಬೇಗ ತಂತ್ರಗಳ ಹೆಣೆಯುತ್ತ ।
ಗೆಲುವ ಸಾಧಿಸಿ ಶತ್ರು ವಧಿಸಿ ॥ ॥ ೧೩೯ ॥

ಹೊರಟ ದಾಂಡಿಗರಂದು ಮಾರುವೇಷಗಳಲ್ಲಿ ।
ಗಿರಿತೊರೆಗಳನು ದಾಟುತುಡುಪಿ ॥
ಭರದಿ ಸೇರಿದರಾಗ ಹರಿಯ ಮಂದಿರದಲ್ಲಿ ।
ಗುರುವರ್ಯರಿರುತಿರಲು ಮುದದಿ ॥ ॥ ೧೪೦ ॥

ಪುನ್ನಾಗತೋಡಿ – ಏಕತಾಳ

ಕಂಡೆರಗಿದರುಭಯರು ಪುಂಡಾಟಿಕೆ ।
ಯುಂಡಾಡಿಗಳಂತಿರಲವರ ॥
ಭಂಡತನವದೇನಿದ್ದರು ನಿಲಿಸುವೆ ।
ಗಂಡುಗಲಿಳಾಗಿರುವವರ ॥ ॥ ೧೪೧ ॥

ಎನ್ನುತಲಾಲೋಚನೆಯಲಿ ಯತಿವರ ।
ಕಣ್ಣರಳಿಸುತವರನು ನೋಡಿ ॥
ಬನ್ನಿ ಶರೀರವ ಬೆಳೆಸಿದ ಕಲಿಗಳೆ ।
ಚೆನ್ನವಿಹುದದಿಬ್ಬರ ಜೋಡಿ ॥ ॥ ೧೪೨ ॥

ಭೈರವಿ – ಅಷ್ಟತಾಳ

ಏತಕ್ಕೆ ಬಂದಿರಯ್ಯಾ । ಜಟ್ಟಿಗಳು ನೀ ।
ವೇತಕ್ಕೆ ಬಂದಿರಯ್ಯಾ ॥
ಭೀತಿಯಿಲ್ಲದ ನಿಮ್ಮೊ । ಳೇತಕ್ಕೆ ಕಸಿವಿಸಿ ।
ಮಾತನಾಡುವಿರೇನಯ್ಯಾ ॥ ಕಾತರ ಬಿಟ್ಟು ॥ ॥ ೧೪೩ ॥

ನವರೋಜು – ಏಕತಾಳ

ಗಟ್ಟಿಗರೆಂಬುದ ಕೇಳಿ । ಮನ ।
ದಿಪ್ಪದೊಳೀಕಡೆ ದಾಳಿ ॥
ಯಿಟ್ಟೆವು ತಮ್ಮಯ । ಗುಟ್ಟನು ತಿಳಿಯಲು ॥
ಸಿಟ್ಟಿರದಲೆ ನಮ । ಗುತ್ತರಿಸುವಿರೇನ್ ॥ ॥ ೧೪೪ ॥

ಮಾಂಡ್ – ಏಕತಾಳ

ಮಲ್ಲರ ಜೊತೆ ಗುದ್ದಾಟಕೆ ಬರುವಿರೆ ।
ಬಲ್ಲಿದರೆಂಬದಟೊಳಗುಂಟೇ ॥

ಗೆಲ್ಲುವ ಬರವಸೆಯಿದ್ದರೆಯೆಮಗೀ ।
ಗೊಲ್ಲದೆ ಕೊಡಲುತ್ತರವುಂಟೇ ॥ ॥ ೧೪೫ ॥

ಉತ್ತರಿಸಲು ನೀವಿಟ್ಟುದು ಪ್ರಶ್ನೆಯೇ ।
ಗುಟ್ಟೆಂಬುದು ಇಲ್ಲೆಲ್ಲುಂಟು ॥
ಒತ್ತಿರಿಸಿರಿ ನೀವಿಬ್ಬರು ಕತ್ತನು ।
ಸತ್ಯವಹುದೆ ಸಾವಿನ ನಂಟು ॥ ॥ ೧೪೬ ॥

ಭಾಮಿನಿ ಷಟ್ಪದಿ

ಉಸಿರುಗಟ್ಟಿಸಲೆಂದು ಕರಗಳ ।
ಹೊಸೆಹೊಸೆದು ಹಿಚುಕಿದರು ಕೊರಳನು ।
ಕೊಸರದಂತಿರಲಲ್ಲಿ ಗುರುವರ ಖಳರಿಗತಿ ದಣಿವು ॥
ಕಸುವಳಿದು ಬಸವಳಿದು ಕಾಲ್ಗಳು ।
ಕುಸಿದವಲ್ಲೇ ಕಂಗಳಲಿ ಭಯ ।
ವೊಸರಿ ಹಲುಬುತ ಸೋತುಬಿದ್ದರು ಗುರುಪದಾಂಬುಜಕೆ ॥ ೧೪೭ ॥

ಸೌರಾಷ್ಟ್ರ – ತ್ರಿವುಡೆತಾಳ

ಅರರೆಯೇನಿದು ಒಳದ ಸಂಕಟ ।
ಪರಿಯನರಿಯದೆ ಕಡು ಮದಾಂಧರು ।
ಮರಣಕಂಟಕ ಬಂದಿತೆಂದವ । ರೊರಲುತೊರಗೆ ॥ ೧೪೮ ॥

ಗುರುವರನೆ ತಪ್ಪಾದುದೆಮ್ಮಯ ।
ಹರಣವನ್ನುಳಿಸಯ್ಯ ಕರುಣದಿ ।
ಚರಣಕಮಲವ ನೆಚ್ಚಿ ಬದುಕುವೆ । ನಿರತ ದಿವಸ ॥ ೧೪೯ ॥

ಎಂದು ಪರಿಪರಿ ಮರುಗಿ ಬೇಡಲು ।
ಚೆಂದದೊಳಗವರಿಂಗೆ ತೀರ್ಥವ ।
ನಂದು ನೆಚ್ಚಕ್ಷತೆಯ ಗುರುವಾ । ನಂದತೀರ್ಥ ॥ ॥ ೧೫೦ ॥

ಕೊಲಲು ಬಂದವರನ್ನು ಕಾಯುವ ।
ಛಲದಿ ನಿಂದವರನ್ನು ಮಣಿಸುವ ।
ಬಲಯುತರು ಗುರುಮಧ್ವರಿರುವುದು । ನೆಲದ ಪುಣ್ಯ ॥ ೧೫೧ ॥

ಶಂಕರಾಭರಣ – ಅಷ್ಟತಾಳ

ಜಯಸಿಂಹ ಬಂದೆರಗಿದ । ಗುರುದೇವ ।
ಜಯವೆಂದು ನುಡಿ ಸಾರಿದ ॥
ದಯೆಮಾಡಿ ನಮ್ಮಲ್ಲಿ ಬಿಜಯ ಗೈಯುವುದೆಂದು ।
ನಯದೊಳಗೆ ತಾ ಬೇಡಿದ ॥ ॥ ೧೫೨ ॥

ವಾರ್ಧಕ ಷಟ್ಪದಿ

ಬರುವೆವಿದೊ ಹರಿಯಿಚ್ಛೆಯಾಗುತಿದೆ ಹರುಷದಲಿ ।
ಬರುವ ಚಾತುರ್ಮಾಸ್ಯ ವ್ರತ ನಿಮ್ಮವೂರಿನಲಿ ।
ಕೊರತೆಯಾಗದ ಹಾಗೆ ಭಕ್ತಿಭಾವವು ನಿರತವಿರಲೆನುತ
ಗುರು ಹರಸಲು ॥
ದೊರೆತ ಸುದ್ದಿಯ ಕೇಳಿ ಚಡಪಡಿಸಿ ಕಪಟಯತಿ ।
ಕಿರುಬುದ್ಧಿಯೊಳಗೆ ತನ್ನಾಸೆಗಳನರಸುತ್ತ ॥
ಗುರುಮಧ್ವ ಸಂಗ್ರಹಿತವಾದ ಗ್ರಂಥಗಳನ್ನು ಚೋರರಿಂದಪ-
ಹರಿಸಲು ॥
॥ ೧೫೩ ॥

ಮೋಹನ – ಅಷ್ಟತಾಳ

ಪುರವ ಸುಂದರಗೊಳಿಸಿ ತಳಿರು ತೋರಣವಿರಿಸಿ ।
ಅರಸನಕ್ಕರೆಯಿಂದಲಿ ॥
ಬರುವ ಮಧ್ವರಿಗೆ ಸ್ವಾಗತಕೆಂದು ಕೇರಿಯೊ ।
ಳಿರುವರೆಲ್ಲರ ಬಳಸಿ ॥ ॥ ೧೫೪ ॥

ಕಳುವಾದವೆಲ್ಲ ಮಧ್ವರ ಪುಸ್ತಕಗಳೆಂದು ।
ತಿಳಿಯುತ್ತ ಜಯಸಿಂಹನು ॥
ಕಳುಹುತ್ತ ಹುಡುಕಿರೆಂಬಾಜ್ಞೆಯಲಿ ಭಟರನ್ನು ।
ತುಳುವರ ನಾಡಿನೊಳು ॥ ॥ ೧೫೫ ॥

ಅರಿತು ವಿದ್ವಾಂಸರೊಳವಿಿಹುದೆಲ್ಲವ ।
ತರಿಸಲು ದಾರಿಯೆಂದು ॥
ಅರಸ ಶಂಕರಭಟ್ಟನನು ಕರೆದು ಪೇಳಿದ ।
ನಿರಿಸುವೆ ವಾದವೆಂದು ॥ ॥ ೧೫೬ ॥

ಶಂಕರಾಭರಣ – ಮಟ್ಟೆತಾಳ

ಹೊತ್ತು ಮೇನೆಯಲ್ಲಿ ತಂದು । ಸುತ್ತಮುತ್ತ ಭಟರ ದಂಡು ।
ಸ್ತೋತ್ರಗಳನು ಹಾಡುತಿರುವ ಶಿಷ್ಯವೃಂದವು ॥
ವಿಷ್ಣುಮಂಗಲಾಲಯದಲಿ । ಶ್ರೇಷ್ಠತೆಯಲಿ ಗುರುವನಿರಿಸಿ ।
ಪಟ್ಟಣದಲಿ ಹಬ್ಬವಾಯಿತೇನು ಚೆಂದವು ॥ ॥ ೧೫೭ ॥

ಋತು ವಸಂತದಲ್ಲಿ ಬಂದ । ಯತಿವರೇಣ್ಯ ಚರಣಕೆರಗಿ ।
ವ್ರತಕೆ ಸಕಲ ಸಿದ್ಧತೆಗಳ ಮಾಡಿ ಮುದದಲಿ ॥
ಸತಿಯ ಸಹಿತ ರಾಜ ಸೇವ । ಕತೆಗೆ ನಿಲುವುದನ್ನು ಕಂಡು ।
ನುತಿಸಿ ಗುರುವಿನೆಡೆಗೆ ಜನರು ಸೇರುತಿರ್ದರು ॥ ॥ ೧೫೮ ॥

ಬಂದ ಜನರನೆಲ್ಲ ಗುರುವು । ಚೆಂದದಿಂದ ಹರಸಿ ನಗುತ ।
ಲಂದು ನುಡಿದರೆಲ್ಲ ಹರಿಯ ಭಜಿಸಿರೆನ್ನುತ ॥
ಮಂದರಾದ್ರಿ ಧರ ಮುಕುಂದ । ನಂದಕಂದನೊಲವಿನಿಂದ ।
ಹಿಂದಿನೆಲ್ಲ ದೋಷಕಳೆವ ಮೋಕ್ಷ ಸಂತತ ॥ ॥ ೧೫೯ ॥

ವಾದ ಬಯಸಿ ಪದ್ಮತೀರ್ಥ । ಭೇದದೊಳುತ್ರಿವಿಕ್ರಮಾಖ್ಯ ।
ರಾದಿಯಾಗಿ ವೇದಶಾಸ್ತ್ರವೆಲ್ಲ ಕೆದಕಲು ॥
ಮೋದದಿಂದ ಪಕ್ಷ ಕಾಲ । ಬೋಧಿಸುತ್ತ ತತ್ತ್ವದಿಂದ ।
ಸಾಧಿಸಿದರು ವಿಜಯವಾದವನ್ನು ಮಧ್ವರು ॥ ೧೬೦ ॥

ಬಿಲಹರಿ – ಝಂಪೆತಾಳ

ಈ ಜೀವ ಪ್ರತಿಬಿಂಬ ಗುಣಪೂರ್ಣನವ ಬಿಂಬ ।
ಅಜ್ಞಾನವಿರಲದುವೆ ಗೋಚರಿಸದು ॥
ಸುಜ್ಞಾನವಿದು ಮೊದಲು ನಾನರಿತುಕೊಂಡಾಗ ।
ವಿಜ್ಞಾನವದು ಮುಂದೆ ಭಗವಂತನು ॥ ॥ ೧೬೧ ॥

ವೇದಗಳು ಮೂಲ ಪ್ರಮಾಣಗಳು ತರ್ಕದಲಿ ।
ಹಾದಿತಪ್ಪುವ ಭೀತಿಯಿರುವುದೆಂದು ॥
ಸಾದರದಿ ಶರಣಾಗಿ ಕರ್ತವ್ಯವನು ಬಿಡದೊ ।
ಳಾದರಿಸಿರ್ಯೆ ದುಃಖತಪ್ತರನ್ನು ॥ ॥ ೧೬೨ ॥

ಶಂಕರಾಭರಣ – ತ್ರಿವುಡೆತಾಳ

ಸೋತೆವೆನ್ನುತಲವರು ಮಣಿಯುತ ।
ಭೀತಿಯಲಿ ಕದ್ದವುಗಳೀಯುತ ।
ಪಾತಕವ ಮಾಡಿದೆವು ಗುರುವರ ।
ಖಾತಿಗೊಳದಿರು ಶರಣಿದೋ ॥ ॥ ೧೬೩ ॥

ಬಂಧಿಸಲು ಭಟರುಗಳು ಪಂಡಿತ ।
ರಂದು ಬಿನ್ನೈಸಿದರು ಸಭೆಯಲಿ ।
ಮುಂದೆ ನಾವಿನ್ನಿವರ ಶಿಷ್ಯರು ।
ಎಂದು ಪಾದಕೆ ಮಣಿದರು ॥ ॥ ೧೬೪ ॥

ಅರಸ ಬೇಸರದಿಂದ ಯತಿಗಳ ।
ಚರಣಕೆರಗುತ ಕ್ಷಮಿಸಿರೆನ್ನಲು ।
ಪರಮ ಕರುಣಾಮೂರ್ತಿ ನಗುತಲಿ ।
ಹರಸಿ ತೀರ್ಥವನಿತ್ತರು ॥ ॥ ೧೬೫ ॥

ಶಂಕರಾಭರಣ – ಏಕತಾಳ

ರಾಜಗುರು ಪೆಜತ್ತಾಯ ವಿಕ್ರಮಾರ್ಯ್ಯತಾ ।
ನೋಜೆಯಲ್ಲಿ ನಾಡಿಗವನೆ ಹಿರಿಯ ಪಂಡಿತ ॥
ಪೂಜಿಸಿದನು ಮಧ್ವರಾಯ ಸಿರಿ ಪದಾಂಬುಜ ।
ತೇಜಪುಂಜದಲಿ ವಿಲೀನವಾದ ಸಂತಸ ॥ ॥ ೧೬೬ ॥

ಭಾಮಿನಿ ಷಟ್ಪದಿ

ಅಲ್ಲಿ ಚಾತುರ್ಮಾಸವನು ಕಳೆ ।
ದೆಲ್ಲರನು ಹರಸುತ್ತ ಗುರುವರ ।
ನಿಲ್ಲದುಜಿರೆಗೆ ಬಂದು ಪಾಜಕಕೈದು ಧ್ಯಾನದಲಿ ॥
ಬಲ್ಲವರನುಳ್ಳವರ ಬಡವರ ।
ನೆಲ್ಲವರ ಬಾಳಿಂಗೆ ಶುಭಕರ ।
ಗೊಲ್ಲವರ ಶ್ರೀಕೃಷ್ಣನೆಂದುಪದೇಶವನು ಮಾಡಿ ॥ ॥ ೧೬೭ ॥

ಸಾವೇರಿ – ಝುಂಪೆತಾಳ

ಮುಂದೆ ಕೀರ್ತಿಯ ಮೆರೆಸಿರೆಂದೆನುತ ಹಿರಿದಾದ ।
ಸುಂದರಾಂಗನು ಚೆಲುವ ಹರಿಪೂಜೆಯೊಪ್ಪಿಸುತ ॥
ರೆಂದರೆಲ್ಲರು ಬಿಡದೆ ವಿಧಿಯಂತೆ ವಿರಚಿಸುತ ।
ಹೊಂದಿಕೊಂಡಿರಲೆಂದು ನುಡಿಯುತಾಗ ॥ ॥ ೧೬೮ ॥

ಹೃಷಿಕೇಶ ತೀರ್ಥರಿಗೆ ಸಂನ್ಯಾಸವ್ರತ ಸಹಿತ ।
ವಸುಧೆಪತಿ ಕೋದಂಡರಾಮಮೂರ್ತಿಯ ಕೊಡುತ ।
ಕಾಳೀಯ ಮರ್ದನನ ಪೂಜಿಸುತ ಪದಕೆರಗೆ ।
ಲೀಲೆಯೊಳಗಿತ್ತಿಹರು ನರಸಿಂಹ ತೀರ್ಥರಿಂಗೆ ॥ ॥ ೧೬೯ ॥

ಯತಿ ಜನಾರ್ದನ ತೀರ್ಥರಿಂಗೆ ಸಂನ್ಯಾಸವ ।
ಜೊತೆಗಿತ್ತು ದ್ವಿಭುಜ ಕಾಳೀಯ ಮರ್ದನ ಹರಿಯ ॥
ಇತ್ತು ಕಾಷಾಯವನು ಯತಿಯುಪೇಂದ್ರರಿಗಂದು ।
ಪತ್ನಿಯರ ಸಹಿತಿರುವ ವಿಠ್ಠಲನ ಮೂರ್ತಿಯನು ॥ ೧೭೦ ॥

ಹಾರೈಸುತಿತ್ತಿರುವ ಭೂಸಹಿತ ವಿಠ್ಠಲಗೆ ।
ಆರಾಧಿಸುವ ಕೀರ್ತಿ ವಾಮನಾಚಾರ್ಯರಿಗೆ ॥
ಶ್ರೀವಿಷ್ಣು ತೀರ್ಥರಿಗೆ ಯತಿದೀಕ್ಷೆಯನು ಕೊಟ್ಟು ।
ಭೂವರಾಹನ ಮೂರ್ತಿ ಪೂಜಿಸುವ ವಿಧಿಯಿಟ್ಟು ॥ ೧೭೧ ॥

ಕಾಣಿಸುತ ಸತ್ಯವನು ಶ್ರೀರಾಮತೀರ್ಥರಿಗೆ ।
ಮೇಣೆಂದು ಯೋಗನರಸಿಂಹ ಮೂರ್ತಿಯ ಕೊಡುಗೆ ॥
ಸೋಜಿಗದ ಶ್ರೀಯಧೋಕ್ಷಜ ತೀರ್ಥರಿಗೆ ಸಹಿತ ।
ಪೂಜಾದಿಗಳಿಗೆನ್ನುತಜವಿಠ್ಠಲನ ಕೊಡುತ ॥ ॥ ೧೭೨ ॥

ವರ ಪದ್ಮನಾಭ ತೀರ್ಥರಿಗಿತ್ತು ಸಂನ್ಯಾಸ ।
ಹರಿಯರ್ಚನೆಯ ವಿಧಿಯ ತಪ್ಪಿಸದೆ ನಡೆಸೆನುತ ॥
ಹರಸಿ ಮಂತ್ರಾಕ್ಷತೆಗಳವರೆಲ್ಲರೊಳಗಿಡುತ ।
ನೆರೆದ ಪರಿ ಪುರಜನರಿಗೆಲ್ಲ ದರುಶನ ಕೊಡುತ ॥ ೧೭೩ ॥

ಈ ತೆರದಿ ಪರ್ಯಾಯ ಪದ್ಧತಿಯ ಪಾಲಿಸುತ ।
ಮಾತನನುಸರಿಸಿ ಶ್ರೀಕೃಷ್ಣನರ್ಚಿಸಿರಿ ।

ಭೂತ ಭಾವನನಾದ ಹರಿಯಡಿಯ ಚಿಂತಿಸುತ ।
ನೀತಿ-ರೀತಿಯ ಬೋಧೆ ನಿರತವಿರಲಿ ॥ ॥ ೧೭೪ ॥

ತೋಡಿ - ರೂಪಕತಾಳ

ಮಾಘ ಶುದ್ಧ ನವಮಿಯಂದು ।
ನಾಗಶಯನ ದೇಗುಲದೊಳು ॥
ಬೇಗ ಬೇಗ ಬೋಧೆ ಮಾಡಿ । ಸಾಗುತಿರ್ದರು ॥ ೧೭೫ ॥

ಹೂವ ಮಳೆಯದಾಗಲಲ್ಲಿ ।
ದೇವ ತುಳಸಿಯಮಾಲೆಯೊಂದ ।
ದಾವರಿಸುತ ಮಧ್ವರನ್ನು । ಕೇವಲಿಸಿದುದು ॥ ೧೭೬ ॥

ಕೇದಾರಗೌಳ - ಝಂಪೆತಾಳ

ಮುಂದವರ ಕಂಡಿಲ್ಲ ಸಾಗಿದುದು ಬದರಿಯೆಡೆ ।
ಗಿಂದವರ ಕೀರ್ತಿಗಾಥೆಗೆ ಸಾಕ್ಷಿಯುಡುಪಿಯಿದೆ ॥
ಅಂದವರು ರಚಿಸಿರುವ ನಲವತ್ತು ಕೃತಿಗಳಿವೆ ।
ವೃಂದವಿದೆ ಮಾಧ್ವರದು ಲೋಕದೊಳಗೆ ॥ ॥ ೧೭೭ ॥

ತಪ್ಪುಗಳದೆಷ್ಟೊ ಹರಿ । ಗೊಪ್ಪಿಸುವೆ ನಾನಿಷ್ಟು ।
ಸಪ್ಪೆಯಾಗದ ಹಾಗಿದಿದ್ದರದಕವನು ॥
ಗುಪ್ತವಾಗಿರುತೊಳಗೆ । ದುಪ್ಪಟ್ಟು ಬರೆಸಿದವ ।
ನೊಪ್ಪವಿರಿಸೆಂದು ಪದ । ವಪ್ಪಿಕೊಳ್ಳುವೆನು ॥ ॥ ೧೭೮ ॥

ಬನ್ನಂಜೆ ಗುರುಗಳಲಿ । ಬಿನ್ನಹವು ನುಡಿಕದ್ದೆ ।
ಮನ್ನಿಸಿಹಿರೆಂದೆಂಬ ಬಲದಿ ಮಾಡಿಹೆನು ॥
ಇನ್ನು ಮಂದಕು ಕರುಣೆ । ಕಣ್ಣು ಕಾಪಿಡುತಿರಲಿ ।
ದೆನ್ನ ವಂದನೆ । ಪುಣ್ಯ ಚರಣಗಳಿಗೆ ॥ ॥ ೧೭೯ ॥

ಶ್ರೀಕೃಷ್ಣನಿಗೆ ಶರಣು ಮಂಗಳಾರತಿ ಬೆಳಗಿ ।
ಅಕ್ಕರೆಯಲೆಲ್ಲರನು ಮುನ್ನಡೆಸಲಿ ॥
ಯಕ್ಷಗಾನವು ಭವ್ಯ ಕಥೆಗಳಲಿ ರಂಜಿಸುತ ।
ಲೋಕದೊಳಗಚ್ಚರಿಯು ಮೂಡಿ ಬರಲಿ ॥ ॥ ೧೮೦ ॥

◈◈◈



ಕವಿ ಶ್ರೀ ಸದಾನಂದ ಶರ್ಮರವರು ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಇಡುವಾಣಿಯಲ್ಲಿ 1968ನೇ ಇಸವಿ ಸೆಪ್ಟಂಬರ್ ಏಳರಂದು ಶ್ರೀ ಎಸ್. ಭಾಸ್ಕರ ಶರ್ಮ ಮತ್ತು ಶ್ರೀಮತಿ ಜಲಜಾಕ್ಷಮ್ಮ ದಂಪತಿಗಳ ಹಿರಿಯ ಮಗನಾಗಿ ಜನಿಸಿದವರು. ಯಕ್ಷಗಾನ ತಾಳಮದ್ದಲೆಯ ಉತ್ತಮ ಅರ್ಥಧಾರಿಯೆಂಬ ಹೆಸರು ಗಳಿಸಿರುವ ಇವರು ಪ್ರಸ್ತುತ ಸಾಗರದಲ್ಲಿ ಪ್ರಜ್ಞಾ ಭಾರತಿ ವಿದ್ಯಾ ಮಂದಿರ ಮತ್ತು ಶ್ರೀ ಗಜಾನನ ಸಂಸ್ಕೃತ ಪಾಠಶಾಲೆಗಳೆಂಬ ಶಿಕ್ಷಣ ಸಂಸ್ಥೆಗಳನ್ನು ವ್ಯವಸ್ಥಾಪಕರಾಗಿ ನಡೆಸುತ್ತಿದ್ದಾರೆ. ಇವರ ಕಾಮಧೇನು ಕವನ ಸಂಕಲನವು ಶಿವಮೊಗ್ಗದಲ್ಲಿ ನಡೆದ 73ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಬಿಡುಗಡೆಯಾಗಿದೆ.

ಆಚಾರ್ಯ ಶ್ರೀಮಧ್ವಚರಿತ ಇವರು ರಚಿಸಿದ ಐದನೇ ಪ್ರಸಂಗವಾದರೂ ಮೊದಲು ಬಿಡುಗಡೆಯಾಗುತ್ತಿದೆ. ಹತ್ತಾರು ಗೀತ ನಾಟಕಗಳನ್ನೂ ನೂರಾರು ಕವಿತೆಗಳನ್ನೂ ಇವರು ರಚಿಸಿದ್ದಾರೆ.

ಯಕ್ಷಗಾನ ಕೇಂದ್ರ

ಶಿವಪ್ರಭಾ, ಹಯಗ್ರೀವನಗರ, ಉಡುಪಿ – 576 102

ISBN : 978-81-906210-7-6

Price : ₹. 30